ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಅಕ್ಟೋಬರ್ 09, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 147 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999





ದಾವಣಗೆರೆ ನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಸಪ್ತರ್ಷಿ ಯೋಗಧಾರ ಸ್ಪೋರ್ಟ್ಸ್ ಅಕಾಡೆಮಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧಾ ಕಾರ್ಯಕ್ರಮದಲ್ಲಿ ಯೋಗ ನೃತ್ಯದ ವಿವಿಧ ಭಂಗಿಗಳು.

## 10-12ನೇ ತರಗತಿಯ ಎರಡು ಪರೀಕ್ಷೆ ಕಡ್ಡಾಯವಲ್ಲ: ಪ್ರಧಾನ್



ನವದೆಹಲಿ, ಅ. 8 - ವರ್ಷದಲ್ಲಿ ಎರಡು ಬಾರಿ ನಡೆಯಲಿರುವ ಹತ್ತು ಹಾಗೂ 12ನೇ ತರಗತಿಯ ಪರೀಕ್ಷೆಗಳಿಗೆ ಹಾಜರಾಗುವುದು ಕಡ್ಡಾಯವಲ್ಲ. ವಿದ್ಯಾರ್ಥಿಗಳ ಒತ್ತಡ ಕಡಿಮೆ ಮಾಡಲು ಎರಡು ಅವಕಾಶ ನೀಡಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.

ಖಾಸಗಿ ಸುದ್ದಿಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿದ್ದ ಅವರು, ಒಂದೇ ಬಾರಿ ಪರೀಕ್ಷೆಗೆ ಅವಕಾಶ ಇದೆ ಎಂಬ ಕಾರಣಕ್ಕಾಗಿ ವಿದ್ಯಾರ್ಥಿಗಳು ಒತ್ತಡಕ್ಕೆ ಸಿಲುಕಬಾರದು ಎಂದು ಎರಡು ಪರೀಕ್ಷೆಯ ಅವಕಾಶ ನೀಡಲಾಗಿದೆ. ಇದು ಕಡ್ಡಾಯವಲ್ಲ, ಆಯ್ಕೆಗೆ ಬಿಟ್ಟದ್ದು ಎಂದಿದ್ದಾರೆ.

ವಿದ್ಯಾರ್ಥಿಯೋರ್ವ ತನಗೆ ಒಂದೇ ಪರೀಕ್ಷೆಯಿಂದ ತೃಪ್ತಿ ಇದೆ ಎಂದು ಭಾವಿಸಿದರೆ ಮುಂದಿನ ಪರೀಕ್ಷೆ ಆಯ್ಕೆ ಮಾಡಿಕೊಳ್ಳುವ ಅಗತ್ಯವಿಲ್ಲ. ಎರಡು ಪರೀಕ್ಷೆ ಅವಕಾಶಕ್ಕೆ ವಿದ್ಯಾರ್ಥಿಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿದೆ ಎಂದು ಸಚಿವರು ಹೇಳಿದ್ದಾರೆ. ನೂತನ ಪಠ್ಯ ಚೌಕಟ್ಟನ್ನು ಕಳೆದ ಆಗಸ್ಟ್‌ನಲ್ಲಿ ಪ್ರಕಟಿಸಲಾಗಿತ್ತು. ವರ್ಷದಲ್ಲಿ ಎರಡು ಬಾರಿ ಪರೀಕ್ಷೆ ಬರೆಯಲು ಅವಕಾಶ ನೀಡುವುದಾಗಿ ತಿಳಿಸಲಾಗಿತ್ತು. ಈ ಎರಡೂ ಪರೀಕ್ಷೆಗಳಲ್ಲಿ ಉತ್ತಮ (3ನೇ ಪುಟಕ್ಕೆ)

## ಆಫ್ಘಾನ್ ಭೂಕಂಪದ ಸಾವಿನ ಸಂಖ್ಯೆ 2 ಸಾವಿರಕ್ಕೆ

ಇಸ್ಲಾಮಾಬಾದ್, ಅ. 8 - ಪಶ್ಚಿಮ ಆಫ್ಘಾನಿಸ್ತಾನದಲ್ಲಿ ಸಂಭವಿಸಿದ ಭೂಕಂಪಕ್ಕೆ ಸಿಲುಕಿ 2 ಸಾವಿರಕ್ಕೂ ಹೆಚ್ಚು ಜನರು ಸಾವನ್ನಪ್ಪಿ ದ್ದಾರೆ. ಎರಡು ದಶಕಗಳಲ್ಲಿ ಸಂಭವಿಸಿದ ಅತ್ಯಂತ ಮಾರಣಾಂತಿಕ ಭೂಕಂಪ ಇದಾಗಿದೆ. ರಿಕ್ಟರ್ ಮಾಪಕದಲ್ಲಿ 6.3ರಷ್ಟಿದ್ದ ಭೂಕಂಪ ಹಾಗೂ ಮೂರು ಪಶ್ಚಾತ್ ಕಂಪನಗಳು ಶನಿವಾರ ಸಂಭವಿಸಿದ್ದವು. ಇದು ಹೇರತ್ ನಗರದಿಂದ 40 ಕಿ.ಮೀ. ದೂರದಲ್ಲಿ ಕೇಂದ್ರೀಕೃತವಾಗಿತ್ತು. ಭೂಕಂಪದಿಂದ ಹಲವು ಹಳ್ಳಿಗಳು ನಾಶವಾಗಿವೆ. ನೂರಾರು ನಾಗರಿಕರು ಅವಶೇಷಗಳಡಿ ಸಿಲುಕಿದ್ದಾರೆ.

## ಇಸ್ರೇಲ್‌ನಲ್ಲಿರುವ ಭಾರತೀಯರು ಸುರಕ್ಷಿತ

ಜೆರುಸಲೇಂ, ಅ. 8 – ಇಸ್ರೇಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯರು ಯಾವುದೇ ಅಹಿತಕರ ಘಟನೆಗಳನ್ನು ಎದುರಿಸಿಲ್ಲ. ಆದರೂ, ಅಲ್ಲಿರುವ ಪ್ರವಾಸಿಗರೂ ಸೇರಿದಂತೆ ಭಾರತದ ನಾಗರಿಕರನ್ನು ತೆರವುಗೊಳಿಸಲು ಭಾರತದ ರಾಯಭಾರಿ ಕಚೇರಿಗಳಿಗೆ ಮನವಿಗಳು ಬಂದಿವೆ. ಇಸ್ರೇಲ್‌ನಲ್ಲಿ ಭಾರತದ 18 ಸಾವಿರ ನಾಗರಿಕರಿದ್ದಾರೆ. ಇಸ್ರೇಲ್‌ಗೆ ತೆರಳಿದ್ದ ಹಲವು ಉದ್ಯಮಿಗಳೂ ಬಿಕ್ಕಟ್ಟಿನ ನಡುವೆ ಸಿಲುಕಿದ್ದಾರೆ.

# ಮನಸ್ಸಿನ ನಿಯಂತ್ರಣಕ್ಕೆ ಯೋಗ ಸಹಕಾರಿ

### ರಾಷ್ಟ್ರಮಟ್ಟದ ಮಹಿಳೆಯರ ಯೋಗಾಸನ ಚಾಂಪಿಯನ್‌ಶಿಪ್ ಉದ್ಘಾಟಿಸಿದ ಬ್ರಹ್ಮಾಕುಮಾರಿ ಲೀಲಾಜಿ

ದಾವಣಗೆರೆ, ಅ.8- ಯೋಗ ಮತ್ತು ಧ್ಯಾನದಿಂದ ದೈಹಿಕ, ಮಾನಸಿಕ ಆರೋಗ್ಯ ಸದೃಢವಾಗಲಿದೆ. ಮನಸ್ಸಿನ ನಿಯಂತ್ರಣಕ್ಕೆ ಯೋಗ ಸಹಕಾರಿಯಾಗಲಿದೆ. ಯೋಗಾಭ್ಯಾಸದ ಜೊತೆಗೆ ಉತ್ತಮ ವ್ಯಕ್ತಿತ್ವ, ಸನ್ನಡತೆ ಹೊಂದಬೇಕೆಂದು ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಸಲಹೆ ನೀಡಿದರು.

ಸಪ್ತರ್ಷಿ ಯೋಗಧಾರ ಸ್ಪೋರ್ಟ್ಸ್ ಅಕಾಡೆಮಿ ದಾವಣಗೆರೆ ಇವರ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಪ್ರಥಮ ಬಾರಿಗೆ ಏರ್ಪಡಿಸಿದ್ದ ರಾಷ್ಟ್ರಮಟ್ಟದ ಮಹಿಳೆಯರ ಯೋಗಾಸನ ಚಾಂಪಿಯನ್‌ಶಿಪ್ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಅತಿಯಾಗಿ ಮೊಬೈಲ್ ಬಳಕೆ, ಟಿವಿ ವೀಕ್ಷಣೆಯಲ್ಲಿ ಅವಲಂಬಿತರಾಗಿರುವುದು ಕಂಡು ಬರುತ್ತಿದೆ. ಯೋಗದ ಜೊತೆಗೆ ಸನ್ನಡತೆ, ಸಚ್ಚಾರಿತ್ರ್ಯ ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಪುರುಷರಿಗಿಂತ ಹತ್ತು ಪಟ್ಟು ಗುಣ, ಪ್ರಾಮಾಣಿಕತೆ, ಸತ್ಯದ ವಿಚಾರದಲ್ಲಿ ಮುಂದಿರುವುದು ಸಮಾನತೆ. ಪುರುಷರಂತೆ ಧೂಮಪಾನ ಮಾಡುವುದು, ಮದ್ಯ ಸೇವನೆ ಮಾಡುವುದು, ಅವರಂತೆ ಬಟ್ಟೆಗಳನ್ನು ಧರಿಸುವುದನ್ನು ಅನುಕರಣೆ ಮಾಡುವುದಲ್ಲ. ಬದಲಾಗಿ ಅವರಿಗಿಂತ ಗುಣದಲ್ಲಿ ಸಮಾನತೆ ಸಾಧಿಸಬೇಕೆಂದರು.




ಸಮಾಜದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಎರಡು ಜಡೆಗಳು ಒಂದೆಡೆ ಸೇರಿದರೆ ಸುಮ್ಮನಿರುವುದಿಲ್ಲ ಎಂದು ಹೇಳಲಾಗುತ್ತಿದೆ. ಆದರೆ ಬ್ರಹ್ಮಾಕುಮಾರಿ ಈಶ್ವರೀಯ ವಿವಿ ಅದನ್ನು ಸುಳ್ಳು ಮಾಡಿದೆ. 15 ಸಾವಿರ ಸಮರ್ಪಿತ ಸಾಧಕಿಯರು ಒಂದೆಡೆ ಸೇರಿ ಧಾರ್ಮಿಕ, ಅಧ್ಯಾತ್ಮಿಕ, ಸಾಮಾಜಿಕ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿರುವುದು ವಿಶೇಷವೇ ಸರಿ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಯೋಗಾಭ್ಯಾಸದ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯವಿದೆ. ಇಡೀ ವಿಶ್ವಕ್ಕೆ ಯೋಗ ನೀಡಿರುವ ಕೊಡುಗೆ ಅನನ್ಯವಾದುದು ಎಂದರು.

ಯೋಗಾಭ್ಯಾಸಕ್ಕೆ ಯಾವುದೇ ವಯೋಮಿತಿ ಇರುವುದಿಲ್ಲ. ಯೋಗದಿಂದ ಏಕಾಗ್ರತೆ ಬರುತ್ತದೆ. ಮಕ್ಕಳಿಗೆ ಯೋಗ ಕಲಿಕೆ ಹೆಚ್ಚು ಸಹಕಾರಿಯಾಗಲಿದೆ ಎಂದು ಹೇಳಿದರು.

ಇಂದಿನ ಒತ್ತಡದ ಕೆಲಸಗಳ ಮಧ್ಯೆಯೂ ಕೂಡ ಯೋಗಾಭ್ಯಾಸಕ್ಕಾಗಿ ಒಂದಿಷ್ಟು ಸಮಯ (4ನೇ ಪುಟಕ್ಕೆ)

## ಜಾತಿ ಪಕ್ಷಪಾತದ ಮಸೂದೆಗೆ ತಡೆ

ವಾಷಿಂಗ್ಟನ್, ಅ. 8 - ಜಾತಿ ಆಧರಿತ ಪಕ್ಷಪಾತ ತಡೆ ಮಸೂದೆಯನ್ನು ತಡೆಯಲು ಅಮೆರಿಕದ ಕ್ಯಾಲಿ ಫೋರ್ನಿಯಾದ ಗವರ್ನರ್ ಗ್ಯಾವಿನ್ ನ್ಯೂಸಮ್ ಅವರು ವಿಟೋ ಚಲಾಯಿಸಿದ್ದಾರೆ. ಹಿಂದೂ ಸಮುದಾಯ ವನ್ನು ಹಳದಿ ಗಣ್ಣಿನಿಂದ ನೋಡುವ ಏಕೈಕ ಉದ್ದೇಶದಿಂದ ಈ ಮಸೂದೆ ಜಾರಿಗೆ ತರಲಾಗಿತ್ತು ಎಂದು ನ್ಯೂಸಮ್ ಹೇಳಿದ್ದಾರೆ.

ಲಿಂಗ, ಜನಾಂಗ, ಬಣ್ಣ, ಧರ್ಮ, ರಾಷ್ಟ್ರೀಯ ಮೂಲ ಸೇರಿದಂತೆ ಯಾವುದೇ ಸ್ವರೂಪದಲ್ಲೂ ಭೇದಭಾವ ಮಾಡಬಾರದು ಎಂಬ ಕಾಯ್ದೆ ಈಗಾಗಲೇ ಕ್ಯಾಲಿಫೋರ್ನಿಯಾದಲ್ಲಿ ಜಾರಿಯಲ್ಲಿದೆ. ಇದರಲ್ಲಿ ಜಾತಿ ಆಧರಿತ ಭೇದವೂ ಬರುತ್ತದೆ. ಹೊಸ ಮಸೂದೆಯ ಅಗತ್ಯವಿಲ್ಲ ಎಂದು ಗವರ್ನರ್ ಹೇಳಿದ್ದಾರೆ.

ಕ್ಯಾಲಿಫೋರ್ನಿಯಾದ ಜನಪ್ರತಿನಿಧಿ ಸದನ ಹಾಗೂ ಸೆನೆಟ್ ಎರಡೂ ಬಹುಮತದಿಂದ ಈ ಮಸೂದೆ ಜಾರಿಗೆ ತಂದಿದ್ದವು. ಈ ಮಸೂದೆ ಜಾರಿಗೆ ಬಂದಿದ್ದರೆ ಕ್ಯಾಲಿ ಫೋರ್ನಿಯಾದ ಸಾವಿರಾರು ಜನರು ತಮ್ಮ ಜನಾಂಗೀಯ ಇಲ್ಲವೇ ಧಾರ್ಮಿಕ ಗುರುತಿನ ಕಾರಣದಿಂದಾಗಿ ಪಕ್ಷಪಾತ ಎದುರಿಸಬೇಕಿತ್ತು ಎಂದು ಹಿಂದೂ ಅಮೆರಿಕನ್ ಫೌಂಡೇಷನ್‌ನ ಸಮೀರ್ ಕಲ್ರ ಹೇಳಿದ್ದಾರೆ.

ಇದು ಮಹತ್ವದ ಬೆಳವಣಿಗೆ. ವೀಟೋ ಮೂಲಕ ಮಸೂದೆ ತಡೆದಿರುವುದನ್ನು ಸ್ವಾಗತಿಸುವುದಾಗಿ ಡೆಮೊ ಕ್ರಾಟ್ ನಾಯಕ ಅಜಯ್ ಭುಟಾರಿಯ ಹೇಳಿದ್ದಾರೆ.

## ತುರ್ತು ರಾಷ್ಟ್ರೀಯ ಐಕ್ಯತಾ ಸರ್ಕಾರಕ್ಕೆ ಇಸ್ರೇಲ್ ಪರಿಶೀಲನೆ

ಜೆರುಸಲೇಂ, ಅ. 8 - ಹಮಾಸ್ ಉಗ್ರರು ನಡೆಸಿರುವ ಭೀಕರ ದಾಳಿಯಿಂದ ನೂರಾರು ಇಸ್ರೇಲಿಗಳು ಹತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಇಸ್ರೇಲ್ ಉನ್ನತ ನಾಯಕರು ತಮ್ಮ ಭಿನ್ನಾಭಿಪ್ರಾಯವನ್ನು ಮರೆತು ತುರ್ತು ರಾಷ್ಟ್ರೀಯ ಐಕ್ಯತಾ ಸರ್ಕಾರ ರಚಿಸಲು ಪರಿಶೀಲಿಸುತ್ತಿದ್ದಾರೆ.

ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ಹಾಗೂ ಪ್ರತಿಪಕ್ಷದ ನಾಯಕರಾದ ಯಾರ್ ಲ್ಯಾಪಿಡ್ ಹಾಗೂ ಬೆನ್ನಿ ಗಾಂಟ್ಜ್ ಅವರು ಶನಿವಾರ ಈ ಸಾಧ್ಯತೆಯ ಬಗ್ಗೆ ಚರ್ಚಿಸಿದ್ದಾರೆ. (3ನೇ ಪುಟಕ್ಕೆ)

## ಮೃತದೇಹವನ್ನು ಕಾಲುವೆಗೆ ಎಸೆದ ಪೊಲೀಸರು ಅಮಾನತ್ತು

ಮುಜಾಫರಪುರ, ಅ. 8 – ಅಪಘಾತಕ್ಕೆ ಸಿಲುಕಿ ಮೃತಪಟ್ಟ ವ್ಯಕ್ತಿಯ ದೇಹವನ್ನು ಕಾಲವೆಗೆ ಎಸೆದ ಬಿಹಾರದ ಮೂವರು ಪೊಲೀಸರನ್ನು ಅಮಾನತ್ತುಗೊಳಿಸಲಾಗಿದೆ. ಮುಜಾಫರಪುರ ಜಿಲ್ಲೆಯ ಫಕುಲಿ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಈ ವಿಡಿಯೋದ ಬಗ್ಗೆ ವಿಚಾರಣೆ ನಡೆಸಿದ ನಂತರ ಕ್ರಮ ತೆಗೆದುಕೊಳ್ಳಲಾಗಿದೆ.

# ವಂದೇ ಭಾರತ್ ಪ್ರಯಾಣಿಕರ ಸಂಖ್ಯೆ ಇಳಿಕೆ

ದಾವಣಗೆರೆ, ಜು. 16 – ಕಳೆದ ಜೂನ್ ತಿಂಗಳಲ್ಲಿ ಧಾರವಾಡ ಹಾಗೂ ಬೆಂಗಳೂರು ನಡುವೆ ಆರಂಭವಾದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಆರಂಭಿಕ ದಿನಗಳಲ್ಲಿ ದೊರೆತ ಉತ್ತಮ ಸ್ಪಂದನೆ ನಂತರದ ತಿಂಗಳುಗಳಲ್ಲಿ ಕ್ಷೀಣಿಸಿದೆ.

ಜುಲೈನಲ್ಲಿ ವಂದೇ ಭಾರತ್ ರೈಲುಗಳಲ್ಲಿ ಸರಾಸರಿ ಬುಕ್ಕಿಂಗ್ ಪ್ರಮಾಣ ಶೇ.88.58ರವರೆಗೆ ತಲುಪಿತ್ತು. ಕೆಲವು ದಿನಗಳಲ್ಲಿ ಪ್ರಯಾಣಿಕರ ಬೇಡಿಕೆ ಸೀಟುಗಳಿಗಿಂತ ಹೆಚ್ಚಾಗಿರುವುದೂ ಕಂಡು ಬಂದಿತ್ತು.

ಆದರೆ, ಆಗಸ್ಟ್ ತಿಂಗಳಲ್ಲಿ ಎಕ್ಸಿಕ್ಯೂಟಿವ್ ಕ್ಲಾಸ್ (ಇ.ಸಿ.) ವರ್ಗದಲ್ಲಿ ಧಾರವಾಡ - ಬೆಂಗಳೂರು ಮಾರ್ಗದಲ್ಲಿ ಶೇ.52 ಟಿಕೆಟ್ ಬುಕ್ ಆಗಿವೆ. ಚೇರ್ ಕಾರ್ (ಸಿ.ಸಿ.) ವರ್ಗದಲ್ಲಿ ಪ್ರಯಾಣಿಕರ ಸಂಖ್ಯೆ ಶೇ.48ರವರೆಗೆ ಇಳಿಕೆಯಾಗಿದೆ.

ಇದೇ ತಿಂಗಳಲ್ಲಿ ಬೆಂಗಳೂರಿನಿಂದ ಧಾರವಾಡ ಮಾರ್ಗದಲ್ಲಿ ಇ.ಸಿ. ಮಾರ್ಗದಲ್ಲಿ ಶೇ.54 ಹಾಗೂ ಸಿ.ಸಿ. ವರ್ಗದಲ್ಲಿ ಶೇ.49 ಮಾತ್ರ ಟಿಕೆಟ್ ಬುಕ್ಕಿಂಗ್ ಆಗಿದೆ.



**ಆಗಸ್ಟ್‌ನಲ್ಲಿ ಬುಕ್ಕಿಂಗ್ ಶೇ. 48ರವರೆಗೆ ಇಳಿಕೆ**

ಸೆಪ್ಟೆಂಬರ್ ತಿಂಗಳಲ್ಲಿ ಪ್ರಯಾಣಿಕರ ಸಂಖ್ಯೆ ತುಸು ಹೆಚ್ಚಾಗಿದೆ. ಧಾರವಾಡದಿಂದ ಬೆಂಗಳೂರು ಮಾರ್ಗದಲ್ಲಿ ಇ.ಸಿ. ವರ್ಗದಲ್ಲಿ ಶೇ.65 ಹಾಗೂ ಸಿ.ಸಿ. ವರ್ಗದಲ್ಲಿ ಶೇ.61 ಬುಕ್ಕಿಂಗ್ ಆಗಿದೆ. ಇದೇ ಅವಧಿಯಲ್ಲಿ ಬೆಂಗಳೂರಿನಿಂದ ಧಾರವಾಡ ಮಾರ್ಗದಲ್ಲಿ ಇ.ಸಿ. ವರ್ಗದಲ್ಲಿ ಶೇ.68 ಹಾಗೂ ಸಿ.ಸಿ. ವರ್ಗದಲ್ಲಿ ಶೇ.60ರಷ್ಟು ಬುಕ್ಕಿಂಗ್ ಆಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ರೈಲ್ವೆ ಅಧಿಕಾರಿಗಳು, ಸಾಮಾನ್ಯವಾಗಿ ಮಳೆಗಾಲದಲ್ಲಿ ರೈಲ್ವೆ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗುತ್ತದೆ. ವಂದೇ ಭಾರತ್ ರೈಲುಗಳೂ ಸಹ ಇದಕ್ಕೆ ಹೊರತಾಗಿಲ್ಲ. ಪ್ರಯಾಣಿಕರ ಇಳಿಕೆ ಪ್ರಮಾಣ ಅನಿರೀಕ್ಷಿತವೇನೂ ಅಲ್ಲ ಎಂದಿದ್ದಾರೆ.

ಮುಂಬರುವ ಹಬ್ಬ ಹಾಗೂ ರಜೆ ದಿನಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಲಿದೆ. ವಂದೇ ಭಾರತ್ ಪ್ರಯಾಣಿಕರ ಸಂಖ್ಯೆ ಆ ಸಂದರ್ಭದಲ್ಲಿ ಏರುಮುಖವಾಗುವ ನಿರೀಕ್ಷೆ ಇದೆ ಎಂದವರು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ, ಇಂದೋರ್ – ಭೂಪಾಲ್, ಭೂಪಾಲ್ – ಜಬಲ್ಪುರ ಹಾಗೂ ನಾಗಪುರ – ಬಿಲಾಸ್ಪುರ ಮಾರ್ಗಗಳಲ್ಲಿ ಆರಂಭವಾದ ವಂದೇ ಭಾರತ್ ರೈಲುಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಕಡಿಮೆ ಇತ್ತು. ಈ ಮಾರ್ಗಗಳಲ್ಲಿ ಶೇ.25ರವರೆಗೆ ಪ್ರಯಾಣ ದರವನ್ನೂ ಇಳಿಕೆ ಮಾಡಲಾಗಿತ್ತು.

ಬೆಂಗಳೂರು - ಧಾರವಾಡ ಮಾರ್ಗಗಳಲ್ಲಿ ದರ ಇಳಿಕೆ ಮಾಡುವ ಮಟ್ಟಿಗೆ ಪ್ರಯಾಣಿಕರ ಸಂಖ್ಯೆ ಇಳಿಕೆಯೇನೂ ಆಗಿಲ್ಲ ಎಂದೂ ಅಧಿಕಾರಿಗಳು ಹೇಳಿದ್ದಾರೆ.

## ಅತ್ತಿಬೆಲೆ ಪಟಾಕಿ ದುರಂತದಲ್ಲಿ 14 ಸಾವು ಸಿ.ಐ.ಡಿ. ತನಿಖೆಗೆ ಆದೇಶ

ಬೆಂಗಳೂರು, ಅ. 8 - ಆನೇಕಲ್ ಪಟ್ಟಣದ ಅತ್ತಿಬೆಲೆಯ ಪಟಾಕಿ ಗೋದಾಮಿನಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 14 ಮಂದಿ ಸಾವಿಗೀಡಾದ ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಲಾಗಿದೆ

ಪತ್ರಕರ್ತರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಷಯ ತಿಳಿಸಿದ್ದು, ಅಂಗಡಿ ಮಾಲೀಕ ರಾಮಸ್ವಾಮಿ ರೆಡ್ಡಿ ನಿರ್ಲಕ್ಷ್ಯ ವಹಿಸಿರುವುದು ಕಂಡುಬಂದಿದೆ. ಇಲ್ಲಿ ಯಾವುದೇ ಸುರಕ್ಷತಾ ವ್ಯವಸ್ಥೆ ಕಂಡು ಬಂದಿಲ್ಲ ಎಂದಿದ್ದಾರೆ.

ಪಟಾಕಿ ಸಂಗ್ರಹಿಸಿಡುವ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅಂಗಡಿಯ ಪರವಾನಗಿಯನ್ನು ಇತ್ತೀಚೆಗೆ ನವೀಕರಿಸಲಾಗಿದೆ. ಆದರೆ, ಪಟಾಕಿಗಳ ಸಂಗ್ರಹಕ್ಕೆ ಅನುಮತಿ ಇರಲಿಲ್ಲ. ಅಂಗಡಿಯಲ್ಲಿ ಯಾವುದೇ ಅಗ್ನಿಶಾಮಕ ಸಾಧನ ಕಂಡು ಬಂದಿಲ್ಲ



ಎಂದವರು ಹೇಳಿದ್ದಾರೆ. ಇದು ಅಂಗಡಿ ಮಾಲೀಕನ ಸಂಪೂರ್ಣ ನಿರ್ಲಕ್ಷ್ಯವಾಗಿದೆ. ಹಾಗಾಗಿ ಘಟನೆಯ ತನಿಖೆಯನ್ನು ಸಿಐಡಿಗೆ ನೀಡುತ್ತಿದ್ದೇನೆ ಎಂದು ಹೇಳಿದರು.

ಘಟನೆಯಲ್ಲಿ 14 ಮಂದಿ ಸಾವಿಗೀಡಾಗಿದ್ದಾರೆ ಮತ್ತು ಮೃತರೆಲ್ಲರೂ ತಮಿಳುನಾಡಿನವರು. ಅವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳು. ಅವರು ತಮ್ಮ ಶಿಕ್ಷಣಕ್ಕಾಗಿ ಹಣ ಸಂಪಾದಿಸಲು ಇಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳಿದರು. ಉಪಮುಖ್ಯಮಂತ್ರಿ ಡಿ.ಕೆ. (4ನೇ ಪುಟಕ್ಕೆ)

## ಬರದಿಂದ ನಷ್ಟವಾದ ಬೆಳೆಗೆ ಹೆಚ್ಚಿನ ಪರಿಹಾರ ನೀಡಲು ಶಾಸಕ ಬಿ.ದೇವೇಂದ್ರಪ್ಪ ಒತ್ತಾಯ



ಜಗಳೂರು, ಅ.8- ಮಳೆ ಬಾರದೇ ನಷ್ಟ ಉಂಟಾಗಿರುವ ರೈತರಿಗೆ ಕೇಂದ್ರ ಸರ್ಕಾರ ಹೆಚ್ಚಿನ ಪರಿಹಾರ ನೀಡಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ಕೇಂದ್ರ ಬರ ಅಧ್ಯಯನ ತಂಡಕ್ಕೆ ಒತ್ತಾಯಿಸಿದರು.

ಶನಿವಾರ ಕೇಂದ್ರ ಬರ ಅಧ್ಯಯನ ತಂಡದೊಂದಿಗೆ ತಾಲ್ಲೂಕಿನ ಹಿರೇಮಲ್ಲನಹೊಳೆ ಕೆರೆ ಬಳಿಯ ಶೇಂಗಾ ಬೆಳೆ, ಭರಮಸಮುದ್ರ ಬಳಿ ಮೆಕ್ಕೆಜೋಳದ ಜಮೀನುಗಳಿಗೆ ಭೇಟಿ ಶಾಸಕರು ಮಾತನಾಡಿದರು.

ರಾಜ್ಯದ 224 ಕ್ಷೇತ್ರಗಳಲ್ಲಿ ಜಗಳೂರು ತಾಲ್ಲೂಕು ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕಾಗಿದೆ. ಸ್ವಾತಂತ್ರ್ಯಾ ನಂತರ ಕೇವಲ ನಾಲ್ಕು ವರ್ಷ ಮಾತ್ರ ಬೆಳೆ ಫಸಲು ಉತ್ತಮವಾಗಿ ಬಂದಿದೆ. ಸಾಗುವಳಿ ನಂತರ ಬೆಳೆಗಳ ಸಾಲಿನಲ್ಲಿ ಕನಿಷ್ಠ 30 ಮಿ.ಮೀ ಮಳೆಯಿಲ್ಲದೆ ಎಲ್ಲಾ ಬೆಳೆಗಳು ಸಂಪೂರ್ಣವಾಗಿ ಹಾಳಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಜಿ.ಪಂ. ಸಿಇಒ ಸುರೇಶ್ ಬಿ.ಇಟ್ನಾಳ್, ಅಪರ ಜಿಲ್ಲಾಧಿಕಾರಿ ಲೋಕೇಶ್, (4ನೇ ಪುಟಕ್ಕೆ)

# ಹರಿಹರದಲ್ಲಿ ವಿಜೃಂಭಣೆಯ ಹಿಂದೂ ಮಹಾಗಣಪತಿ ವಿಸರ್ಜನೆ

### ಟ್ರ್ಯಾಕ್ಟರ್ ಓಡಿಸುವ ಮೂಲಕ ಗಣೇಶ ವಿಸರ್ಜನೆ ಮೆರವಣಿಗೆಗೆ ಚಾಲನೆ ನೀಡಿದ ಶಾಸಕ ಬಿ.ಪಿ. ಹರೀಶ್

ಹರಿಹರ, ಅ. 8- ನಗರದ ಹಿಂದೂ ಜಾಗರಣ ವೇದಿಕೆ ಮತ್ತು ಹಿಂದೂ ಮಹಾಗಣಪತಿ ಸೇವಾ ಸಮಿತಿ ವತಿಯಿಂದ ಪ್ರತಿಷ್ಠಾಪನೆ ಮಾಡಿದ್ದ ಹಿಂದೂ ಮಹಾಗಣಪತಿಯನ್ನು ಸಡಗರ, ಸಂಭ್ರಮ ಮತ್ತು ವಿಜೃಂಭಣೆಯಿಂದ ತುಂಗಭದ್ರಾ ನದಿಯಲ್ಲಿ ವಿಸರ್ಜನೆ ಮಾಡಲಾಯಿತು.

ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಶ್ರೀ ವಿನಾಯಕ ಮೂರ್ತಿಗೆ ಅರ್ಚಕ ವೆಂಕಟೇಶ ವಿಶೇಷ ಪೂಜೆ, ಮಹಾಮಂಗಳಾರತಿ ಸೇರಿದಂತೆ ಪೂಜಾ ಕಾರ್ಯ ನೆರವೇರಿಸಿದ ಬಳಿಕ ಶಾಸಕ ಬಿ.ಪಿ. ಹರೀಶ್ ಟ್ರ್ಯಾಕ್ಟರ್ ಓಡಿಸುವ ಮೂಲಕ ಗಣೇಶ ವಿಸರ್ಜನೆ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಮಹಾಸ್ವಾಮೀಜಿ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಪಾಲ್ಗೊಂಡಿದ್ದರು.

ಯಂತ್ರಗಳ ಮೂಲಕ ಪೇಪರ್ ಹೂವುಗಳನ್ನು ಕುಣಿಯುವ ಯುವಕರ ಮೇಲೆ ಎರಚಲಾಯಿತು. ಸಾಯಿಬಾಬಾ ಮಂದಿರ ಟ್ರಸ್ಟ್, ಪಾಟೀಲ್ ವಂಶಸ್ಥರು, ನವರತ್ನ ಜ್ಯೂಯಲರ್ಸ್, ಅಕ್ಷಯ ಆಸ್ಪತ್ರೆ, ಶಿವಮೊಗ್ಗ ರಸ್ತೆ ಆಟೋ ನಿಲ್ದಾಣದ ಚಾಲಕರು ಮತ್ತು ಮಾಲೀಕರು, ನಗರದ ವಿವಿಧ ಸಂಘಟನೆಯವರಿಂದ ಮಜ್ಜಿಗೆ, ಪಾನಕ, ಪ್ರಸಾದವನ್ನು ಮೆರವಣಿಗೆ ಹಾದು ಹೋಗುವ ಆಯಕಟ್ಟಿನ ಸ್ಥಳಗಳಲ್ಲಿ ಹಂಚಿದರು.



ಮೆರವಣಿಗೆ ಹೋಗುವ ಸ್ಥಳವನ್ನು ಕೇಸರಿ ಬಂಟಿಂಗ್ಸ್, ಬ್ಯಾನರ್, ಬಾವುಟವನ್ನು ಕಟ್ಟಿ ಶೃಂಗಾರ ಮಾಡಲಾಗಿತ್ತು. ಗಾಂಧಿ ವೃತ್ತದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಛತ್ರಪತಿ ಶಿವಾಜಿ, ರಾಣಿ ಚೆನ್ನಮ್ಮ ವೃತ್ತದಲ್ಲಿ ವೀರ ಆಂಜನೇಯ ಸ್ವಾಮಿ ಮತ್ತು ಬಸವೇಶ್ವರ, ಶಿವಮೊಗ್ಗ ರಸ್ತೆಯಲ್ಲಿ ಶ್ರೀರಾಮ ಲಕ್ಷ್ಮಣ, ಸಾವರ್ಕರ್ ಭಾವಚಿತ್ರವನ್ನು ಇಡಲಾಗಿತ್ತು.

ಪೊಲೀಸ್ ಇಲಾಖೆಯಿಂದ ಸಿಪಿಐಗಳಾದ ಸುರೇಶ್ ಸರಗಿ, ಸಿದ್ದನಗೌಡ, ಪಿಎಸ್‌ಐಗಳಾದ ದೇವಾನಂದ್, ಪ್ರಭು ಕೆಳಗಿನ ಮನೆ, ಅರವಿಂದ್ ಸೇರಿದಂತೆ ಅಧಿಕಾರಿಗಳು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಅಡಿಷನಲ್ ಎಸ್ಪಿ ಬಸರಗಿ, ಡಿವೈಎಸ್ಪಿ ಜಿ.ಎಸ್. ಬಸವರಾಜ್ ಇತರರು (4ನೇ ಪುಟಕ್ಕೆ)

## ಏಳು ತಾಸು ವಿದ್ಯುತ್ ಪೂರೈಸದಿದ್ದರೆ ಶಾಸಕರ ಕಚೇರಿಗೆ ಮುತ್ತಿಗೆ : ಎಚ್ಚರಿಕೆ



ನ್ಯಾಮತಿ, ಅ. 8- ಕೃಷಿ ಪಂಪ್‌ಸೆಟ್‌ಗಳಿಗೆ ಮೊದಲಿನಂತೆ ಏಳು ಗಂಟೆ ಯಾವುದೇ ಅಡಚಣೆ ಇಲ್ಲದೆ ವಿದ್ಯುತ್ ಪೂರೈಕೆ ಮಾಡಬೇಕು. ಇಲ್ಲವಾದಲ್ಲಿ ಶಾಸಕರ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಅಖಂಡ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಬೆಳಗುತ್ತಿ ಬಿ.ಎಚ್. ಉಮೇಶ್ ಎಚ್ಚರಿಸಿದ್ದಾರೆ.

ಪಟ್ಟಣದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಮಳೆ ಇಲ್ಲದೆ ಬೆಳೆಗಳು ಹಾಳಾಗಿದ್ದು, ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಇದರ ನಡುವೆ ಕೃಷಿ ಪಂಪ್‌ಸೆಟ್‌ಗಳಿಗೆ ಬೆಳಗ್ಗೆ 2 ಗಂಟೆ ಮತ್ತು ರಾತ್ರಿ 2ಗಂಟೆ ವಿದ್ಯುತ್ ನೀಡಿದರೆ, ಇರುವ ಅಲ್ಪಸ್ವಲ್ಪ ಬೆಳೆ ಮತ್ತು ತೆಂಗು, ಅಡುಕೆ, ಬಾಳೆ ತೋಟಗಳನ್ನು ಉಳಿಸುಕೊಳ್ಳುವುದಾದರೂ ಹೇಗೆ...? ಎಂದು ಪ್ರಶ್ನಿಸಿದರು.

ರೈತ ಬೆಳೆ ಬೆಳದರಷ್ಟೆ ಎಲ್ಲರೂ ಆಹಾರ ದೊರೆಯುತ್ತದೆ. ಮೊದಲೇ ಮಳೆ ಇಲ್ಲದೆ ಬೆಳೆಗಳು ಕೈಕೊಟ್ಟಿದ್ದು, ಒಮ್ಮೆ ಅತಿವೃಷ್ಟಿ, ಮತ್ತೊಮ್ಮೆ ಅನಾವೃಷ್ಟಿ. ಇದರ ನಡುವೆ ವಿದ್ಯುತ್ ವ್ಯತ್ಯಯ ಮಾಡಿದರೆ ರೈತ ಬದುಕುವುದಾದರೂ ಹೇಗೆ. ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಆಹಾರ ಅಭದ್ರತೆ ಉಂಟಾದರೂ ಆಗಬಹುದು. ಪ್ರಸ್ತುತ ನಿಗಧಿ ಮಾಡಿರುವ ಸಮಯವನ್ನು ಮತ್ತೊಮ್ಮೆ ಪರಿಶೀಲಿಸಿ ವಾರದೊಳಗೆ ಸರಿಪಡಿಸಿಕೊಂಡು ಮೊದಲಿನಂತೆ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿದರು.

ರಾಜ್ಯ ಸರ್ಕಾರದ ಕೃಷಿಕರಿಗೆ ನೀಡುತ್ತಿದ್ದ ಸಹಾಯಧನ ಹಾಗೂ ಮಕ್ಕಳಿಗೆ ನೀಡುವ ವಿದ್ಯಾನಿಧಿ ಸ್ಕಾಲರ್‌ಶಿಪ್ ಕೈಬಿಟ್ಟಿದ್ದು, ಸರ್ಕಾರ ಈ ಬಗ್ಗೆ ಮರು ಪರಿಶೀಲಿಸಿ ಜಾರಿ ಮಾಡುವಂತೆ ಮನವಿ ಮಾಡಿದರು.

## ಸರ್ಕಾರಿ ಶಾಲೆಗಳಿಗೆ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಭೇಟಿ, ಪರಿಶೀಲನೆ




ಹರಪನಹಳ್ಳಿ, ಅ.8- ಶಿಥಿಲಗೊಂಡಿರುವ ಶಾಲಾ ಕಟ್ಟಡ ತೆರವು ಮಾಡಿ, ನೂತನ ಕಟ್ಟಡ ನಿರ್ಮಾಣ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಸೂಚಿಸಿದರು.

ತಾಲ್ಲೂಕಿನ ಬಂಡ್ರಿ, ಅರಸನಾಳು, ರಂಗಾಪುರ, ಬಿಕ್ಕಿಮಕಟ್ಟಿ, ಹಗರಿಶೀರನಹಳ್ಳಿ, ಹೊಸಕೋಟೆ, ಜಂಗಮ ತುಂಬಿಗೆರೆ ಸೇರಿದಂತೆ ವಿವಿಧ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಶನಿವಾರ ಮತ್ತು ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲ್ಲೂಕಿನ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ತೆರಳಿ ಶಾಲೆಯ ಮಕ್ಕಳ ಹಾಜರಾತಿಯ ಬಗ್ಗೆ ಮತ್ತು ಶಾಲೆಗಳ ಶೌಚಾಲಯ, ಅಡುಗೆ ಕೊಠಡಿ, ಕುಡಿಯುವ ನೀರು, ಆಟದ ಮೈದಾನ ಹಾಗೂ ಇತರೆ ಮೂಲಭೂತ ಸೌಕರ್ಯಗಳು ಸೇರಿದಂತೆ, ಶಾಲೆಗಳ ವಿದ್ಯಾಭ್ಯಾಸದ ಕೊಠಡಿಗಳಿಗೆ ನ್ಯಾಯಾಧೀಶರು ಭೇಟಿ ನೀಡಿ, ಶಾಲೆಗಳಲ್ಲಿರುವ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಯಾವುದಾದರೂ ಸಮಸ್ಯೆ ಇದೆಯೇ? ಎಂದು ವಿದ್ಯಾರ್ಥಿಗಳಿಗೆ ಕೇಳಿದರು. ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಗುಣಮಟ್ಟದ ಆಹಾರವನ್ನು ವಿದ್ಯಾರ್ಥಿಗಳಿಗೆ ನೀಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ್ ಅವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ್, ಶಿಕ್ಷಕರಾದ ಆರ್. ರಾಮಪ್ಪ, ಜಿ. ಹೊನ್ನತ್ತೆಪ್ಪ, ವಾಗೀಶ್, ಎಲ್.ಹೆಚ್. ಗಿರಿರಾಜ್, ತಾಲ್ಲೂಕು ಕಾನೂನು ಸೇವಾ ಸಮಿತಿಯ ಸಿಬ್ಬಂದಿಗಳಾದ ಕೊಟ್ರೇಶ್, ಬಸವರಾಜ್ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ಅಡುಗೆ ಸಹಾಯಕರು ಇದ್ದರು.

## ರಾಣೇಬೆನ್ನೂರು : ಜಾನಪದ ನೃತ್ಯಗಳ ಉತ್ಸವ

ರಾಣೇಬೆನ್ನೂರು, ಅ. 8 - ತಾಲ್ಲೂಕಿನ ಕರೂರ ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಭಾರತೀಯ ಜಾನಪದ ನೃತ್ಯಗಳ ಉತ್ಸವ ಜರುಗಿತು.

ನಾಗಪುರದ ಮಧ್ಯಕ್ಷೇತ್ರ ಸಾಂಸ್ಕೃತಿಕ ಕೇಂದ್ರ, ರಾಜ್ಯ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರೂರು ಗ್ರಾಮ ಪಂಚಾಯತಿ ಸೇರಿದಂತೆ ಗ್ರಾಮಗಳ ಎಲ್ಲಾ ಸಂಘಗಳ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಕಾರ್ಯಕ್ರಮದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕಲಾ ತಂಡಗಳ ಮೆರವಣಿಗೆ ಜರುಗಿತು. ಉತ್ಸವದಲ್ಲಿ ಪಶ್ಚಿಮ ಬಂಗಾಳ, ಗುಜರಾತ್, ಮಹಾರಾಷ್ಟ್ರ, ಓರಿಸ್ಸಾ, ಗೋವಾ, ಪಂಜಾಬ್, ಕರ್ನಾಟಕದ ಕಲಾತಂಡಗಳ ಕಲಾವಿದರು ಮೆರಗು ನೀಡಿದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಲಲಿತಮ್ಮ ಹಿರೇಬಿದರಿ, ಉಪಾಧ್ಯಕ್ಷೆ ನೀಲಮ್ಮ ಪೂಜಾರ, ಸದಸ್ಯೆ ಶ್ರೀವಾಣಿ ಲೆಕ್ಕಿಕೋಣಿ, ಗೌರಮ್ಮ ಸಣ್ಣಬೊಮ್ಮಜ್ಜಿ, ಆಶಾ ಮಾಯಾಚಾರಿ, ವಸಂತ ವಡ್ಡರ್, ಸವಿತಾ ಹಿರೇಗೌಡರ, ಚೋಳಪ್ಪ ಕಚವಿರವಿ ಹಾಗೂ ಪಿಡಿಓ ಜ್ಯೋತಿ ಕಮ್ಮಾರ, ಕಲಾವಿದ ಪರಶುರಾಮ ಬಣಕಾರ, ತಿಪ್ಪೇಶ ಲೆಕ್ಕಿಕೋಣಿ ಸೇರಿದಂತೆ ಗ್ರಾಮದ ಮುಖಂಡರು ಪಾಲ್ಗೊಂಡಿದ್ದರು.



## ಹರಿಹರದಲ್ಲಿ ಬಡವರಿಗೆ ಮನೆ ನಿರ್ಮಿಸಲು ಕರುನಾಡ ಕದಂಬ ರಕ್ಷಣಾ ವೇದಿಕೆ ಮನವಿ



ಹರಿಹರ, ಅ. 8- ನಗರದಲ್ಲಿ ಕನ್ನಡ ನಾಡಿನ ಪ್ರಥಮ ರಾಜ ಮಯೂರ ವರ್ಮನ ಪ್ರತಿಮೆ, ಕನ್ನಡ ಭವನ ನಿರ್ಮಾಣ, ನಗರ ನಿವಾಸಿಗಳಿಗೆ ಕಳೆದ 25 ವರ್ಷಗಳಿಂದ ಆಶ್ರಯ ಯೋಜನೆಯಡಿ ಮನೆಗಳನ್ನು ನಿರ್ಮಾಣ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಕರುನಾಡ ಕದಂಬ ರಕ್ಷಣಾ ವೇದಿಕೆ ಕಾರ್ಯಕರ್ತರು ನಗರಸಭೆ ಅಧ್ಯಕ್ಷರು ಮತ್ತು ಆಯುಕ್ತರಿಗೆ ಮನವಿ ಸಲ್ಲಿಸಿದರು.

ಹೊರ ಗುತ್ತಿಗೆ ಆಧಾರದ ಮೇಲೆ ನೂರು ಕಾರ್ಮಿಕರನ್ನು ನೇಮಿಸದಿದ್ದರೆ ಇಲಾಖೆ ಮುಂದೆ ಮೌನ ಪ್ರತಿಭಟನೆ ನಡೆಸಲಾಗುವುದು. ಹರಿಹರದ ಸಮಗ್ರ ಮಾಹಿತಿಯುಳ್ಳ ನಾಮಫಲಕವನ್ನು ನಗರದ ನಾಲ್ಕೂ ದಿಕ್ಕುಗಳಲ್ಲಿ ಅಳವಡಿಸಬೇಕು. ಒತ್ತುವರಿ ಜಾಗವನ್ನು ನಗರಸಭೆ ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು. ನಗರಸಭೆ ವತಿಯಿಂದ ಶೀಘ್ರವೇ ಶೌಚಾಲಯ ನಿರ್ಮಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಾಗರಾಜ್ ಸಾರಥಿ, ಮಹಮದ್, ಪರಶುರಾಮ್, ಮಾರುತಿ, ತರುಣ್, ಕಿರಣ್ ವಿ. ನಾಯಕ್, ತಾಲ್ಲೂಕು ವಿದ್ಯಾರ್ಥಿ ಘಟಕದ ಅಧ್ಯಕ್ಷ ಅಜಯ್, ಮರಿಯಜ್ಜ, ಗಣೇಶ್ ಮತ್ತಿತರರು ಹಾಜರಿದ್ದರು.

## 26ರಿಂದ ರಾಷ್ಟ್ರ ಮಟ್ಟದ ಪಾರಂಪರಿಕ ವೈದ್ಯರ ಸಮ್ಮೇಳನ

ದಾವಣಗೆರೆ, ಅ.8- ಪಾರಂಪರಿಕ ವೈದ್ಯ ಪರಿಷತ್‌ವತಿಯಿಂದ ರಾಷ್ಟ್ರ ಮಟ್ಟದ ಹಾಗೂ 14ನೇ ರಾಜ್ಯ ಮಟ್ಟದ ಪಾರಂಪರಿಕ ವೈದ್ಯರ ಸಮ್ಮೇಳನವನ್ನು ಇದೇ ದಿನಾಂಕ 26ರಿಂದ 28ವರೆಗೆ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಶ್ರೀಕ್ಷೇತ್ರ ಆದಿಚುಂಚನಗಿರಿಯಲ್ಲಿ ಆದಿಚುಂಚನಗಿರಿ ಮಠದ ಸಹಯೋಗದಲ್ಲಿ ಏರ್ಪಡಿಸಲಾಗಿದೆ ಎಂದು ಪರಿಷತ್‌ನ ಜಿಲ್ಲಾ ಸಂಚಾಲಕರಾದ ಕೆ.ಎಂ. ಪುಷ್ಪಲತಾ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ದಿನಾಂಕ 26 ರಂದು ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ವೈದ್ಯ ಪರಿಷತ್ತಿನ ಗೌರವಾಧ್ಯಕ್ಷ ಪ್ರಸನ್ನನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸಮ್ಮೇಳನ ನಡೆಯಲಿದ್ದು ವೈದ್ಯ ಪರಿಷತ್ ಅಧ್ಯಕ್ಷ ಜಿ. ಮಹದೇವಯ್ಯ ಅಧ್ಯಕ್ಷತೆ ವಹಿಸುವರು ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮ ಉದ್ಘಾಟಿಸುವರು. ಕೃಷಿ ಸಚಿವ ಚೆಲುವರಾಯಸ್ವಾಮಿ, ಸಂಸದೆ ಸುಮಲತಾ, ಶಾಸಕರಾದ ಬಾಲಕೃಷ್ಣ, ಶರಣು ಸಲಗರ, ವೈದ್ಯ ಪರಿಷತ್ ಸಂಸ್ಥಾಪಕ ಗಾ.ನಂ.ಶ್ರೀಕಂಠಯ್ಯ, ಡಾ. ಸತ್ಯನಾರಾಯಣ ಭಟ್ಟ, ಪ್ರೊ. ಜಿ. ಹರಿರಾಮಮೂರ್ತಿ ಸೇರಿದಂತೆ ಹಲವು ಗಣ್ಯರು ಭಾಗವಹಿಸುವರು.

ಇದೇ ಸಂದರ್ಭದಲ್ಲಿ ಮೂರು ಸಾವಿರಕ್ಕೂ ಅಧಿಕ ಪಾರಂಪರಿಕ ವೈದ್ಯರ ಮಾಹಿತಿ ಒಳಗೊಂಡ ಮಾಹಿತಿ ಕೋಶ ಬಿಡುಗಡೆಗೊಳಿಸಲಾಗುವುದು. ಉದ್ಘಾಟನಾ ಕಾರ್ಯಕ್ರಮದ ಬಳಿಕ ಆರು ಕಾಯಿಲೆಗಳ ಬಗ್ಗೆ 60 ವೈದ್ಯರು ತಮ್ಮ ಅನುಭವದ ವಿಷಯ ಮಂಡಿಸುವರು. ಕಾರ್ಯಕ್ರಮದಲ್ಲಿ ಪಾರಂಪರಿಕ ವೈದ್ಯರ ಜ್ಞಾನದ ದಾಖಲೀಕರಣವೂ ನಡೆಯಲಿದೆ ಎಂದರು.

ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ನಾಡಿನ ಹಲವು ಮಠಾಧೀಶರು, ಆಯುರ್ವೇದ ವಿದ್ಯಾರ್ಥಿಗಳು, ತಜ್ಞ ಆಯುರ್ವೇದ ವೈದ್ಯರು ಭಾಗವಹಿಸಲಿದ್ದಾರೆ. ರಾಜ್ಯದ ಸುಮಾರು ಎರಡು ಸಾವಿರ ಪಾರಂಪರಿಕ ವೈದ್ಯರು ಹಾಗೂ ಆಂಧ್ರ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಛತ್ತೀಸ್‌ಗಡ ಸೇರಿದಂತೆ ಬೇರೆ ಬೇರೆ ರಾಜ್ಯಗಳಿಂದ 500ಕ್ಕೂ ಅಧಿಕ ಪಾರಂಪರಿಕ ವೈದ್ಯರು ಸಮ್ಮೇಳನದಲ್ಲಿ ಭಾಗವಹಿಸುವರು. ದಾವಣಗೆರೆ ಜಿಲ್ಲೆಯಿಂದ ಅಂದಾಜು ಒಂದು ನೂರು ಜನ ಪಾರಂಪರಿಕ ವೈದ್ಯರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಪಾರಂಪರಿಕ ವೈದ್ಯ ಪರಿಷತ್‌ನ ಪ್ರಮುಖರಾದ ಮಮತಾ, ಶಾರದಾ, ಕೆ.ಪಿ. ಲತಾ, ಈಶಣ್ಣ ಇನ್ನಿತರರು ಸುದ್ದಿಗೋಷ್ಠಿಯಲ್ಲಿದ್ದರು. ದಾವಣಗೆರೆ ಪಾರಂಪರಿಕ ವೈದ್ಯ ಪರಿಷತ್‌ನ ಪ್ರಮುಖರು ಪತ್ರಿಕಾಗೋಷ್ಠಿಯಲ್ಲಿದ್ದರು.

## ವಿಕಲಚೇತನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ಅ.8- ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ಪ್ರಸಕ್ತ ಸಾಲಿನಲ್ಲಿ ನ್ಯಾಷನಲ್ ಇ-ಸ್ಕಾಲರ್‌ಶಿಪ್ ಪಡೆ ಯಲು ವಿಕಲಚೇತನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸ ಲಾಗಿದೆ. ಪ್ರಿ-ಮೆಟ್ರಿಕ್ (9ನೇ ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿ ರುವ) ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ನವೆಂಬರ್ 30 ಕೊನೆಯ ದಿನಾಂಕವಾಗಿರುತ್ತದೆ. ಕುಟುಂಬದ ಆದಾಯದ ಮಿತಿ ರೂ. 2.00 ಲಕ್ಷ ನಿಗದಿಪಡಿಸಲಾಗಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಡಿಸೆಂಬರ್ 30 ಕೊನೆಯ ದಿನವಾಗಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಕುಟುಂಬದ ಆದಾಯದ ಮಿತಿ ರೂ. 2 ಲಕ್ಷ ನಿಗದಿಪಡಿಸಿದೆ. ಹೆಚ್ಚಿನ ಮಾಹಿತಿಗೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಹಾಗೂ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರದ ದೂರವಾಣಿ ಸಂಖ್ಯೆ 08192-263936 ಅಥವಾ ವೆಬ್‌ಸೈಟ್:www.scholarship.gov.in ಅನ್ನು ಸಂಪರ್ಕಿಸಲು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಕೆ.ಕೆ ಪ್ರಕಾಶ್ ತಿಳಿಸಿದ್ದಾರೆ.

## ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ : ಜೆಸ್ಕಾಂ ನೌಕರನ ಬಂಧನ



ಹೂವಿನಹಡಗಲಿ, ಅ.8- ಜೆಸ್ಕಾಂ ನೌಕರ ಕೊಟ್ರೇಶ್ ಬಾರ್ಕಿ ಹಗರನೂರಿನ ಖಾಸಗಿ ಶಾಲೆಯ ವಿದ್ಯಾರ್ಥಿನಿಯರಿಗೆ ಅಕ್ರಮವಾಗಿ ಶಾಲೆ ಪ್ರವೇಶ ಮಾಡಿ, ಲೈಂಗಿಕ ಕಿರುಕುಳ ಕೊಟ್ಟ ಹಾಗೂ ವಿಕೃತವಾಗಿ ವರ್ತಿಸಿದ ವಿಡಿಯೋ ಹಾಗೂ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿ ಬಿಟ್ಟಿದ್ದನ್ನು ಗಮನಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ವಿಚಾರಣೆ ನಡೆಸಿ, ಲೈಂಗಿಕ ಶೋಷಣೆಗೊಳಗಾದ ವಿದ್ಯಾರ್ಥಿನಿಯರನ್ನು ಸಂಪರ್ಕಿಸಿ, ನಂತರ ಹಿರೇಹಡಗಲಿ ಪೊಲೀಸರಿಗೆ ದೂರು ನೀಡಿರುವುದರಿಂದ ಕೊನೆಗೂ ಪೋಕ್ಸೋ ಪ್ರಕರಣ ದಾಖಲಿಸಿ, ಕೊಟ್ರೇಶ್ ಬಾರ್ಕಿಯನ್ನು ಪೊಲೀಸರು ನಿನ್ನೆ ಬಂಧಿಸಿದ್ದಾರೆ.

ತಾಲ್ಲೂಕಿನ ಹಗರನೂರು ಶಾಲೆಯ ಆಡಳಿತ ಮಂಡಳಿಯಲ್ಲಿ ತಮ್ಮ ಸಹೋದರ ಇರುವ ಕಾರಣಕ್ಕೆ ಮತ್ತು ಸದರಿ ಶಾಲೆಯನ್ನು ಆರಂಭಿಸಲು ಪರಿಶ್ರಮ ಹಾಕಿದ್ದೇನೆಂಬ ನೆಪದಲ್ಲಿ ತಾನು ಮಾಡುವ ಜೆಸ್ಕಾಂ ಕೆಲಸಕ್ಕೆ ಗೈರು ಹಾಜರಾಗಿ ಯಾವಾಗಲೂ ಸದರಿ ಶಾಲೆಯಲ್ಲಿ ಇರುತ್ತಿದ್ದ ಎನ್ನಲಾಗಿದೆ.

## ಕರ್ನಾಟಕ ಡಿ.ಎಸ್.ಟಿ. ಪಿ.ಹೆಚ್.ಡಿ ಶಿಷ್ಯವೇತನಕ್ಕೆ ಅರ್ಜಿ

ದಾವಣಗೆರೆ, ಅ. 8 - ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು (ಡಿ.ಎಸ್.ಟಿ) ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಪಿ.ಹೆಚ್.ಡಿ ಸಂಶೋಧನೆ ಕರ್ನಾಟಕ ಡಿ.ಎಸ್.ಟಿ.-ಪಿ.ಹೆಚ್.ಡಿ ಶಿಷ್ಯವೇತನ ಎಂಬ ಕಾರ್ಯಕ್ರಮವನ್ನು ಇಲಾಖೆಯ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹ ಸೊಸೈಟಿಯ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಡಿ ಶಿಷ್ಯವೇತನ ಪಡೆಯಲು ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಕರ್ನಾಟಕದ ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಸಂಸ್ಥೆ ಹಾಗೂ ಕಾಲೇಜುಗಳಲ್ಲಿ ಪಿ.ಹೆಚ್.ಡಿ ಪದವಿಗೆ ನೋಂದಾಯಿತರಾಗಿರಬೇಕು.

ಅರ್ಹ ಸಂಶೋಧನಾ ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 30 ರೊಳಗೆ ಸಲ್ಲಿಸಬೇಕು ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹ ಸೊಸೈಟಿಯ ವ್ಯವಸ್ಥಾಪಕ ನಿರ್ದೇಶಕ) ಬಸವರಾಜ ತಿಳಿಸಿದ್ದಾರೆ.

## ಉಚಿತ ಲ್ಯಾಪ್‌ಟಾಪ್ ಪಡೆಯಲು ಅರ್ಜಿ

ದಾವಣಗೆರೆ, ಅ.8- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳು ಪ್ರಸಕ್ತ ಸಾಲಿನಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ.

ದಾವಣಗೆರೆ ಉಪ ವಿಭಾಗದ ಕಾರ್ಮಿಕ ಅಧಿಕಾರಿ ಇವರ ವ್ಯಾಪ್ತಿಯಲ್ಲಿ ನೋಂದಣಿಯಾಗಿರುವ ಕಾರ್ಮಿಕರು ಈ ಸೌಲಭ್ಯವನ್ನು ಪಡೆಯಬಹುದು. ಅರ್ಜಿ ನಮೂನೆಯನ್ನು ಸಂಬಂಧಿಸಿದ ಕಾರ್ಮಿಕ ನಿರೀಕ್ಷಕರ ಕಛೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಕಾರ್ಮಿಕ ನಿರೀಕ್ಷಕರಿಗೆ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 11 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಅಧಿಕಾರಿಯವರ ಕಚೇರಿ ದೂ ಸಂ: 08192-237332 ಸಂಪರ್ಕಿಸಲು ಕಾರ್ಮಿಕ ಅಧಿಕಾರಿ ಇಬ್ರಾಹಿಂ ತಿಳಿಸಿದ್ದಾರೆ.

## ಗಾಂಧೀಜಿ ತತ್ವ ಆದರ್ಶ ಮೈಗೂಡಿಸಿಕೊಳ್ಳಲು ಕರೆ



ದಾವಣಗೆರೆ,ಅ.8- ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ 154 ನೇ ಗಾಂಧೀಜಿ ಜಯಂತಿ ಹಾಗೂ 199 ನೇ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮ ದಿನಾಚರಣೆ ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ. ಮಂಜಣ್ಣನವರು, ಗಾಂಧೀಜಿಯವರ ಸರಳ ಜೀವನ, ಪ್ರಾಮಾಣಿಕತೆ, ಸ್ವಚ್ಛತೆ ಮತ್ತು ನೈರ್ಮಲತೆಯ ಬಗ್ಗೆ ತಿಳಿಸಿ, ಮಹಾತ್ಮರ ಆದರ್ಶ ತತ್ವಗಳನ್ನು ಮೈಗೂಡಿಸಿಕೊಳ್ಳುವಂತೆ ತಿಳಿಸಿದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಪಾತ್ರದ ಕುರಿತು ಕಾಲೇಜಿನ ರೇಂಜರ್ ಲೀಡರ್ ಡಾ.ಸಿದ್ದಲಿಂಗಯ್ಯ ಬಿ.ಜೆ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾಲೇಜಿನ ಎಲ್ಲಾ ರೇಂಜರ್ ವಿದ್ಯಾರ್ಥಿನಿಯರು ಸರ್ವಧರ್ಮ ಪ್ರಾರ್ಥನೆ ಮಾಡಿದರು. ಸಾಕಮ್ಮ ನಿರೂಪಿಸಿದರು. ಕಾಲೇಜಿನ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮಾಧಿಕಾರಿ ಡಾ. ಮಹಮ್ಮದ್ ಆಲಿ, ಸುನೀತಾ ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ಒಂದು ಗಂಟೆ ಕಾಲೇಜಿನ ಆವರಣವನ್ನು ಸ್ವಚ್ಛಗೊಳಿಸುವ ಮೂಲಕ ಶ್ರಮದಾನ ಮಾಡಲಾಯಿತು. ಡಾ. ಕಾವ್ಯಶ್ರೀ, ಡಾ ಪೂರ್ಣಿಮ, ಡಾ. ಭೀಮಣ್ಣ, ಡಾ. ಕರಿಬಸಪ್ಪ, ಚಮನ್ ಸಾಬ್ ಇಟಗಿ, ರಾಮಚಂದ್ರಪ್ಪ, ಶೇಷಪ್ಪ, ಡಾ. ಶಿವರಾಜ್, ಶ್ರೀಮತಿ ಅನುರಾಧ ಇತರರಿದ್ದರು.

## ಜಿಲ್ಲಾ ಆರ್ಯ ಈಡಿಗರ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಅ.8- ಜಿಲ್ಲಾ ಆರ್ಯ ಈಡಿಗರ ಸಂಘ ಹಾಗೂ ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪರೇಟವ್ ಸೊಸೈಟಿ ಸಂಯುಕ್ತಾಶ್ರಯದಲ್ಲಿ 2022-23ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ., ಪಿಯುಸಿ, ಪದವಿ ಮತ್ತು ಡಿಪ್ಲೋಮಾ ಪರೀಕ್ಷೆಯಲ್ಲಿ ಶೇ.70 ಹಾಗೂ ಅದಕ್ಕೂ ಹೆಚ್ಚಿನ ಅಂಕ ಗಳಿಸಿರುವ ಸಮಾಜದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು.

ಅರ್ಜಿ ಸಲ್ಲಿಸಲು ಇದೇ ದಿನಾಂಕ 15 ಕೊನೆಯ ದಿನವಾಗಿದೆ. ವಿವರಕ್ಕೆ 8892266468 ಕ್ಕೆ ಸಂಪರ್ಕಿಸುವಂತೆ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಹೆಚ್. ಶಂಕರ್, ಪ್ರಧಾನ ಕಾರ್ಯದರ್ಶಿ ಎ.ನಾಗರಾಜ್ ಕೋರಿದ್ದಾರೆ.

## ಕಿರು ಸಾಲ ಸೌಲಭ್ಯಕ್ಕಾಗಿ ಬೀದಿ ಬದಿ ವ್ಯಾಪಾರಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಅ. 8 - ಕೇಂದ್ರ ಸರ್ಕಾರದ ಆತ್ಮ ನಿರ್ಭರ್ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳು ವ್ಯಾಪಾರ ವಿಸ್ತರಿಸಿಕೊಳ್ಳಲು ಬ್ಯಾಂಕ್ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಕಿರು ಸಾಲ ಸೌಲಭ್ಯ ಕಲ್ಪಿಸಲು ಅರ್ಜಿ ಆಹ್ವಾನಿಸಲಾಗಿದೆ.

ಬೀದಿ ಬದಿ ವ್ಯಾಪಾರಿಗಳಿಗೆ ಹಾಗೂ ಹಾಲು ಮಾರಾಟಗಾರರಿಗೆ ಮತ್ತು ಪತ್ರಿಕಾ ವಿತರಕರಿಗೂ ಆರ್ಥಿಕ ಸುಭದ್ರತೆಗಾಗಿ 3 ಕಂತುಗಳಲ್ಲಿ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಮೊದಲ ಕಂತಿನಲ್ಲಿ ರೂ 10,000 ಸಾಲ ನೀಡಿ 12 ತಿಂಗಳ ಅವಧಿಯಲ್ಲಿ ಸಾಲ ಮರು ಪಾವತಿ ಮಾಡಿದಲ್ಲಿ ರೂ 20,000 ಸಾಲ ನೀಡಲಾಗುವುದು. ಪಡೆದ ಸಾಲವನ್ನು 18 ತಿಂಗಳ ಅವಧಿಯಲ್ಲಿ ಸಾಲ ಮರು ಪಾವತಿ ಮಾಡಿದಲ್ಲಿ ರೂ 50,000 ಸಾಲ ಸೌಲಭ್ಯ ನೀಡಲಾಗುವುದು.

ಸಾಲ ಸೌಲಭ್ಯದ ಜೊತೆಗೆ ಕ್ಯೂ ಆರ್ ಕೋಡ್ ಮಾಡಿಸಿಕೊಳ್ಳಬೇಕು, ನಗರ ಸ್ಥಳೀಯ ಸಂಸ್ಥೆಗಳಿಂದ ಕೈಗೊಳ್ಳಲಾಗುವ ಸಮೀಕ್ಷೆಗೊಳಗಾಗಿ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ಹರಿಹರ ನಗರ ಸಭೆ ಪೌರಾಯುಕ್ತ ಬಸವರಾಜಪ್ಪ ತಿಳಿಸಿದ್ದಾರೆ.

## ವಿಕಲಚೇತನರ ಕ್ಷೇತ್ರ : ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಅ. 8 - ವಿಕಲಚೇತನರ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸಿರುವ ಹಾಗೂ ಸೇವೆಯಲ್ಲಿ ರುವ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.


ಆಸಕ್ತರು ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ (WWW. dwdsc.kar.nic.in ಮೂಲಕ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 25 ರೊಳಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾ ಇಲಾಖೆ ಕಚೇರಿಗೆ ಸಲ್ಲಿಸಬೇಕು.

ವಿವರಕ್ಕೆ ದೂ. 08192-263936 ಹಾಗೂ ಜಿಲ್ಲಾ ವಿಕಲಚೇತನರ ಸಹಾಯವಾಣಿ ದೂ 08192-263939ಗೆ ಸಂಪರ್ಕಿಸಬಹುದು.

## ಮಲೇಬೆನ್ನೂರಿನಲ್ಲಿ ಆರೋಗ್ಯ ತಪಾಸಣೆ

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಬೆಳಗ್ಗೆ 10 ಗಂಟೆಗೆ ಮಲೇಬೆನ್ನೂರು ಲಯನ್ಸ್ ಕ್ಲಬ್, ಶ್ರೀ ವೀರಭದ್ರೇಶ್ವರ ಚಾರಿಟೇಬಲ್ ಟ್ರಸ್ಟ್, ಮಲೇಬೆನ್ನೂರು ಹಾಗೂ ಎಸ್. ಎಸ್. ನಾರಾಯಣ ಹಾರ್ಟ್ ಸೆಂಟರ್ ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಮಲೇಬೆನ್ನೂರು ಹೋಬಳಿಯ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿ ಯರಿಗೆ ಉಚಿತ ಹೃದಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

## ಮಲೇಬೆನ್ನೂರು ಪಟ್ಟಣದ ವಿರೂಪಾಕ್ಷಪ್ಪ ಬಂಡಿಹಾಳ ನಿಧನ



ಮಲೇಬೆನ್ನೂರು ಪಟ್ಟಣದ ವಾಸಿ ಹಾಗೂ ಪಿಡಬ್ಲ್ಯೂಡಿ ಇಲಾಖೆಯ ನಿವೃತ್ತ ವರ್ಕ್ ಇನ್‌ಸ್ಪೆಕ್ಟರ್

**ಶ್ರೀ ವಿರೂಪಾಕ್ಷಪ್ಪ ಬಂಡಿಹಾಳ** (84 ವರ್ಷ)

ಇವರು ದಿನಾಂಕ 08-10-2023 ರ ಭಾನುವಾರ ಮಧ್ಯಾಹ್ನ 12.45 ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 09-10-2023 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಮಲೇಬೆನ್ನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ :**

**ಶ್ರೀಮತಿ ವಿದ್ಯಾ ದಿ. ಕರಿಬಸಪ್ಪ ಬಂಡಿಹಾಳ**
**ಶ್ರೀಮತಿ ಶ್ವೇತಾ ಶ್ರೀ ಗಂಗಾಧರ್ ಬಂಡಿಹಾಳ**
**ಶ್ರೀಮತಿ ನಿರ್ಮಲ ಶ್ರೀ ಎಂ. ಬಸವರಾಜ್, ಕೊಪ್ಪಳ**
**ಮತ್ತು ಮಕ್ಕಳು ಹಾಗೂ ಬಂಧು ಮಿತ್ರರು, ಮಲೇಬೆನ್ನೂರು.**

## ಆರನೇ ಮೈಲಿಕಲ್ಲು ಹೆಚ್.ಜೆ. ರವಿ ನಿಧನ



ದಾವಣಗೆರೆ ತಾಲ್ಲೂಕು ತರಳಬಾಳು ನಗರ (ಆರನೇ ಮೈಲಿಕಲ್ಲು) ವಾಸಿ ಶ್ರೀಮತಿ ಮಂಗಳಮ್ಮ ಇವರ ಪತಿಯವರಾದ

**ಹಂಪನೂರು ಜೆ.ರವಿ**

ಇವರು, ದಿನಾಂಕ 8.10.2023ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 52 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.10.2023ರ ಸೋಮವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ತರಳಬಾಳು ನಗರ (ಆರನೇ ಮೈಲಿಕಲ್ಲು) ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬವರ್ಗ : ಪತ್ನಿ : **ಶ್ರೀಮತಿ ಮಂಗಳ,**
ಮಕ್ಕಳಾದ : **ಐಶ್ವರ್ಯ ಎಂ.ಆರ್., ಹೆಚ್.ಆರ್. ಅನುಷ, ಗಣೇಶ್ ಹೆಚ್.ಆರ್. ಹಂಪನೂರು ವಂಶಸ್ಥರು ಹಾಗು ಬಂಧು-ಮಿತ್ರರು.**
**ಮೊ : 98441 07413, 87479 55566**

## ಬಿ.ಪಿ. ಗಂಗಮ್ಮ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, 12ನೇ ಕ್ರಾಸ್, ದಿ. ಬಿ.ವಿ. ಪುಟ್ಟಸ್ವಾಮಿ ಇವರ ಧರ್ಮಪತ್ನಿ ಶ್ರೀಮತಿ ಬಿ.ಪಿ. ಗಂಗಮ್ಮ (95) ಇವರು, ದಿನಾಂಕ 8.10.2023ರ ಭಾನುವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.10.2023ರ ಸೋಮವಾರ ಬೆಳಿಗ್ಗೆ 10.30ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕಬ್ಬೂರು ಗ್ರಾಮದ ಪೂಜಾರ್ ನೀಲಮ್ಮ ನಿಧನ



ದಾವಣಗೆರೆ ತಾಲ್ಲೂಕು, ಕಬ್ಬೂರು ಗ್ರಾಮದ ಪೂಜಾರ್ ದಿ. ಕಣದ ಮನೆ ಮಹೇಶ್ವರಪ್ಪ ಅವರ ಪತ್ನಿ ನೀಲಮ್ಮ (94) ಇವರು, ದಿನಾಂಕ 8.10.2023ರ ಭಾನುವಾರ ನಿಧನರಾದರು. ಮೃತರು 11 ಜನ ಪುತ್ರರು ಹಾಗೂ ಐವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 9.10.2023ರ ಸೋಮವಾರ ಮಧ್ಯಾಹ್ನ 1.30ಕ್ಕೆ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕಬ್ಬೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಹೆಚ್. ರಾಮಲಿಂಗಪ್ಪ ನಿಧನ



ಚನ್ನಗಿರಿ ತಾಲ್ಲೂಕು, ಬಸವಾಪಟ್ಟಣ ಗ್ರಾಮದ ನಿವೃತ್ತ ಸಬ್ ಇನ್‌ಸ್ಪೆಕ್ಟರ್ ಹೆಚ್. ರಾಮಲಿಂಗಪ್ಪ (76) ಇವರು, ದಿನಾಂಕ 8.10.2023ರ ಭಾನುವಾರ ಸಂಜೆ 5.30ಕ್ಕೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗ ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9.10.2023ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಚನ್ನಗಿರಿ ತಾಲ್ಲೂಕು ಬಸವಾಪಟ್ಟಣದ ರುದ್ರಭೂಮಿಯಲ್ಲಿ ನೆರವೇರಲಿದೆ.

## ನಾಳೆ ದತ್ತಿ ಉಪನ್ಯಾಸ

ದಾವಣಗೆರೆ, ಅ.8- ಕದಳಿ ಮಹಿಳಾ ವೇದಿಕೆ ಜಿಲ್ಲಾ ಘಟಕದ ಆಶ್ರಯದಲ್ಲಿ ದತ್ತಿ ಉಪನ್ಯಾಸ, ಚೆನ್ನಬಸವಣ್ಣ, ಕಲ್ಯಾಣ ಕ್ರಾಂತಿ ಸ್ಮರಣೆ ಕಾರ್ಯಕ್ರಮ ನಗರದ ಶ್ರೀ ಗುರುಬಸವ ಮಂಟಪದಲ್ಲಿ ನಾಡಿದ್ದು ದಿನಾಂಕ 10 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ವಿನೋದ ಅಜಗಣ್ಣನವರ್ ಅಧ್ಯಕ್ಷತೆ ವಹಿಸುವರು. ಲಿಂ. ಪ್ರೊ. ಬಿ.ಕೆ. ಸಿದ್ದಪ್ಪ ದತ್ತಿಯನ್ನು ದತ್ತಿ ದಾನಿಗಳಾದ ಶ್ರೀಮತಿ ಸಾವಿತ್ರಮ್ಮ ಸಿದ್ದಪ್ಪ ಹಾಗೂ ಲಿಂ. ಕೆ.ಜಿ. ಕಲ್ಲಪ್ಪ ಮತ್ತು ಲಿಂ. ಕೆ.ಜಿ. ಲೋಕೇಶ್ವರಮ್ಮ ದತ್ತಿಯನ್ನು ದತ್ತಿ ದಾನಿಗಳಾದ ಕೆ.ಜಿ. ಸದಾನಂದಪ್ಪ ಮತ್ತು ಸಹೋದರರು, ಶ್ರೀಮತಿ ಪಲ್ಲವಿ ಪಾಟೀಲ್ ನಡೆಸಿಕೊಡುವರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**☞ ಆದಿತ್ಯ ಮಾರ್ಗ ಸರಿಪಡಿಸಿದ ಇಸ್ರೋ**

ಬೆಂಗಳೂರು : ದೇಶದ ಮೊದಲ ಸೌರ ನೌಕೆಯಾದ ಆದಿತ್ಯ ಎಲ್1 ಮಾರ್ಗವನ್ನು ಸರಿಪಡಿಸಿರುವುದಾಗಿ ಭಾರತೀಯ ಬಾಹ್ಯಕಾಶ ಸಂಸ್ಥೆ ಇಸ್ರೋ ತಿಳಿಸಿದೆ. ಗಗನನೌಕೆಯ ಆರೋಗ್ಯ ಉತ್ತಮವಾಗಿದೆ ಎಂದು ಇಸ್ರೋ ಹೇಳಿದೆ. ಈ ಗಗನನೌಕೆಯನ್ನು ಭೂಮಿಯಿಂದ 15 ಲಕ್ಷ ಕಿ.ಮೀ. ದೂರದಲ್ಲಿರುವ ಎಲ್1 ಕಕ್ಷೆಗೆ ರವಾನಿಸಲಾಗುತ್ತಿದೆ.

**☞ ಕುಡುಗೋಲು ಕಣ ರೋಗ ಪರೀಕ್ಷೆಗಾಗಿ ಆಶಾ ಕಾರ್ಯಕರ್ತೆಯರಿಗೆ ಉತ್ತೇಜನ**

ನವದೆಹಲಿ : ಕುಡುಗೋಲು ಕಣ (ಸಿಕಲ್ ಸೆಲ್ ) ರೋಗದ ಪರೀಕ್ಷೆಗೆ ಅರ್ಹರನ್ನು ಕರೆ ತರುವ ಹಾಗೂ ಈ ರೋಗದ ಕಾರ್ಡುಗಳನ್ನು ವಿತರಿಸುವ ಆಶಾ ಆರೋಗ್ಯ ಕಾರ್ಯಕರ್ತೆಯರಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರ ಯೋಜಿಸಿದೆ. ಈ ರೋಗ ಬುಡಕಟ್ಟು ಜನರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

**☞ ಗಡಿ ರಕ್ಷಣಾ ಸಿಬ್ಬಂದಿಗೆ ಮಂಡಾರಿನ್ ಕಲಿಸಲು ಯೋಜನೆ**

ನವದೆಹಲಿ : ದೇಶದ ಗಡಿ ಭಾಗಗಳಲ್ಲಿ ನಿಯೋಜಿಸಲಾಗುವ ಸೈನಿಕರಿಗೆ ಮಂಡಾರಿನ್ ಭಾಷೆ ಕಲಿಸಲು ಹಾಗೂ ಈ ಉದ್ದೇಶಕ್ಕಾಗಿ ಪರಿಣಿತರನ್ನು ನೇಮಿಸಲು ಗಡಿ ಭದ್ರತಾ ಪಡೆ ನಿರ್ಧರಿಸಿದೆ. ಗಡಿಯಲ್ಲಿ ಚೀನಾ ಜೊತೆ ಸಭೆ ನಡೆಸುವಾಗ ಇವರು ದುಭಾಷಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ.

**☞ ವಾಯುಪಡೆಯ ಹೊಸ ಬಾವುಟ ಬಿಡುಗಡೆ**

ಪ್ರಯಾಗ್‌ರಾಜ್ : ವಾಯುಪಡೆಯ 91ನೇ ವರ್ಷಾಚರಣೆಯ ಸಂದರ್ಭದಲ್ಲಿ ಹೊಸ ಬಾವುಟವನ್ನು ಬಿಡುಗಡೆ ಮಾಡಲಾಗಿದೆ. ಗಂಗಾ ಹಾಗೂ ಯಮುನಾ ನದಿಗಳ ಸಂಗಮ ಪ್ರದೇಶದಲ್ಲಿ ಭವ್ಯ ವೈಮಾನಿಕ ಪ್ರದರ್ಶನವನ್ನೂ ನಡೆಸಲಾಗಿದೆ.

**☞ 15 ಒಪ್ಪಂದಗಳಿಗೆ ಭಾರತ – ತಾಂಜೇನಿಯ ಸಹಿ**

ನವದೆಹಲಿ : ಭಾರತ ಹಾಗೂ ತಾಂಜೇನಿಯಾಗಳು 15 ಒಪ್ಪಂದಗಳಿಗೆ ಸಹಿ ಹಾಕಿವೆ. ಉಭಯ ದೇಶಗಳು ವ್ಯಾಪಾರದ ಪ್ರಮಾಣವನ್ನು 10 ಶತಕೋಟಿ ಡಾಲರ್‌ಗಳಿಗೆ ಹೆಚ್ಚಿಸಲು ನಿರ್ಧರಿಸಿವೆ.

**☞ ಕಾಂಗ್ರೆಸ್ ಸಭೆಯಲ್ಲಿ ಜಾತಿ ಗಣತಿಯ ಕುರಿತು ಚರ್ಚೆ**

ನವದೆಹಲಿ : ಸೋಮವಾರದಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ನಡೆಯಲಿದೆ. ಸಭೆಯಲ್ಲಿ ವಿವಿಧ ರಾಜ್ಯಗಳಿಗೆ ನಡೆಯಲಿರುವ ವಿಧಾನಸಭಾ ಚುನಾವಣೆಗಳು ಹಾಗೂ ಜಾತಿ ಗಣತಿಗಳು ಪ್ರಮುಖ ಚರ್ಚೆಗೆ ಬರಲಿವೆ.

**☞ ಇಸ್ರೇಲ್ ಸಮರಕ್ಕೆ ಅಮೆರಿಕ ನೆರವು**

ವಾಷಿಂಗ್ಟನ್ : ಹಮಾಸ್ ಉಗ್ರರ ವಿರುದ್ಧದ ಸಮರದಲ್ಲಿ ಇಸ್ರೇಲ್‌ಗೆ ನೆರವು ನೀಡಲು ಅಮೆರಿಕ ಮುಂದಾಗಿದೆ. ಸುಮಾರು 5 ಸಾವಿರ ನೌಕಾ ದಳದ ಸಿಬ್ಬಂದಿ ಹಾಗೂ ವಿಮಾನಗಳನ್ನು ಹೊಂದಿರುವ ಯು.ಎಸ್. ಎಸ್. ಗೆರಾಲ್ಡ್ ಆರ್. ಫೋರ್ಡ್ ಸಮರ ನೌಕೆಯನ್ನು ಇಸ್ರೇಲ್ ಕಡೆ ರವಾನಿಸಲಾಗಿದೆ.

# ಶ್ರಮಿಕ ವರ್ಗದ ಸಮಸ್ಯೆ ಬಗೆಹರಿಸುವಂತೆ ಆಗ್ರಹ




## ನಗರದಲ್ಲಿ ಕಮ್ಯುನಿಸ್ಟ್ ಪಕ್ಷದಿಂದ ಜನಾಗ್ರಹ ಜನಾಂದೋಲನ

ದಾವಣಗೆರೆ, ಅ. 8- ಜನತೆಗೆ ಕೊಟ್ಟ ಭರವಸೆಗಳನ್ನು ಈಡೇರಿಸಿ, ರೈತ, ಕಾರ್ಮಿಕರ, ದುಡಿಯುವ ಜನರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸಿಪಿಐ ಜಿಲ್ಲಾ ಮಂಡಳಿ ಜನಾಗ್ರಹ ಜನಾಂದೋಲನದ ಮೂಲಕ ಒತ್ತಾಯಿಸಿತು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ 15 ಸಾವಿರ, ಸಹಾಯಕಿಯರಿಗೆ 10 ಸಾವಿರ, ಆಶಾ ಕಾರ್ಯಕರ್ತೆಯರಿಗೆ 8 ಸಾವಿರ ಹಾಗೂ ಬಿಸಿಯೂಟ ತಯಾರಕರಿಗೆ 6 ಸಾವಿರ ರೂ. ಗೌರವ ಧನ ಹೆಚ್ಚಿಸಬೇಕು. ಬಿಜೆಪಿ ಜಾರಿಗೊಳಿಸಿದ್ದ ಕೃಷಿ ಕಾಯ್ದೆ, ಎಪಿಎಂಸಿ ಕಾಯ್ದೆಗಳನ್ನು ರದ್ದುಗೊಳಿಸಬೇಕು. ರೈತರ ಮೇಲೆ ದಾಖಲಾಗಿರುವ ರಾಜಕೀಯ ಪ್ರೇರಿತ ಮೊಕದ್ದಮೆಗಳನ್ನು ವಾಪಾಸ್ಸು ಪಡೆಯಬೇಕೆಂದು ಒತ್ತಾಯಿಸಿದರು. 12 ತಾಸಿಗೆ ಹೆಚ್ಚಿಸಿರುವ ಕೆಲಸದ ಅವಧಿಯನ್ನು ಎಂದಿನಂತೆ 8 ತಾಸಿಗೆ ನಿಗದಿಗೊಳಿಸಬೇಕು. ರಾತ್ರಿ ಪಾಳಿಯಲ್ಲಿ ಮಹಿಳೆಯರನ್ನು ದುಡಿಸುವ ಕಾನೂನು ತಿದ್ದುಪಡಿಯನ್ನು ಹಿಂಪಡೆಯಬೇಕೆಂದು ಮನವಿ ಮಾಡಿದರು.

ಪೌರ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಿ, ಸರ್ಕಾರಿ ಸೌಲಭ್ಯಗಳನ್ನು ವಿಸ್ತರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಸಿಪಿಐ ಜಿಲ್ಲಾ ಖಜಾಂಚಿ ಆನಂದರಾಜ್, ಸಹಕಾರ್ಯದರ್ಶಿಗಳಾದ ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಜಗಳೂರು ಮಹಮ್ಮದ್ ಬಾಷಾ, ಮುಖಂಡರಾದ ಐರಣಿ ಚಂದ್ರು, ನರೇಗಾ ರಂಗನಾಥ್, ಸಿದ್ದೇಶ್ ಮಾತನಾಡಿದರು.

ಜನಾಗ್ರಹ ಆಂದೋಲನದ ನೇತೃತ್ವವನ್ನು ಮುಖಂಡರಾದ ಟಿ.ಎಸ್. ನಾಗರಾಜ್, ಹರಿಹರದ ಟಿ.ಹೆಚ್. ನಾಗರಾಜ್, ಸಿ. ರಮೇಶ್, ಗದಿಗೇಶ್, ಜಯ್ಯಪ್ಪ, ಸರೋಜಾ, ಜ್ಯೋತಿಲಕ್ಷ್ಮಿ, ಪದ್ಮ, ನಿಟುವಳ್ಳಿ ಬಸವರಾಜ್, ಕೆ.ಜಿ. ಶಿವಮೂರ್ತಿ, ಕುಮಾರ ನಾಯಕ, ವಿ. ಲಕ್ಷ್ಮಣ, ಬೆಳಲಗೆರೆ ರುದ್ರಮ್ಮ ಸೇರಿದಂತೆ ನೂರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

# ಪಾವತಿ ಕಂಪನಿಗೆ 16,180 ಕೋಟಿ ರೂ. ವಂಚನೆ

ಥಾಣೆ, ಅ. 8 - ಪಾವತಿ ಸೇವಾ ಕಂಪನಿಯೊಂದರ ಮಾಹಿತಿ ಹ್ಯಾಕ್ ಮಾಡಿರುವ ಗುಂಪೊಂದು, ಹಲವು ಬ್ಯಾಂಕ್ ಖಾತೆಗಳಿಂದ 16,180 ಕೋಟಿ ರೂ. ದೋಚಿದೆ ಎಂದು ಥಾಣೆ ಪೊಲೀಸರು ತಿಳಿಸಿದ್ದಾರೆ.

ಸಾಕಷ್ಟು ದಿನಗಳಿಂದ ಈ ವಂಚನೆ ನಡೆಯುತ್ತಿತ್ತು. 25 ಕೋಟಿ ರೂ. ವಂಚನೆಯಾಗಿರುವ ಬಗ್ಗೆ ಮಹಾರಾಷ್ಟ್ರದ ಥಾಣೆಯ ಶ್ರೀನಗರ ಪೊಲೀಸ್ ಠಾಣೆಯಲ್ಲಿ ಏಪ್ರಿಲ್ 2023ರಲ್ಲಿ ದೂರು ದಾಖಲಾಗಿತ್ತು. ವಿಚಾರಣೆ ನಡೆಸಿದಾಗ ದೊಡ್ಡ ವಂಚನೆ ಬೆಳಕಿಗೆ ಬಂದಿದೆ.

ಈ ವಂಚನೆಯ ಬಗ್ಗೆ ಸಂಜಯ್ ಸಿಂಗ್, ಅಮೋಲ್ ಅಂಡಾಲೆ, ಕೇದಾರ್, ಜಿತೇಂದ್ರ ಪಾಂಡೆ ಹಾಗೂ ಗುರುತಿಸಲಾಗದ ಇತರೆ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇದುವರೆಗೂ ಯಾರನ್ನೂ ಬಂಧಿಸಿಲ್ಲ.

ಆರೋಪಿ ಜಿತೇಂದ್ರ ಪಾಂಡೆ ಎಂಬಾತ ಈ ಹಿಂದೆ 8-10 ವರ್ಷಗಳ ಕಾಲ ಬ್ಯಾಂಕುಗಳ ಸಂಪರ್ಕ ಹಾಗೂ ಮಾರಾಟ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸಿದ್ದ.

ಈ ಬೃಹತ್ ವಂಚನೆಯಲ್ಲಿ ಇನ್ನೂ ಸಾಕಷ್ಟು ಜನ ಭಾಗಿಯಾಗಿರುವ ಶಂಕೆ ಇದೆ. ಇದರ ಪರಿಣಾಮ ದೇಶಾದ್ಯಂತ ಇರುವ ಹಲವು ಕಂಪನಿಗಳು ಹಾಗೂ ವ್ಯಕ್ತಿಗಳ ಮೇಲೆ ಆಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಪ್ರಧಾನಿಗೆ ಅವಮಾನ : ಡಿಬಿ ವಿರುದ್ಧ ಕ್ರಮಕ್ಕೆ ಬಿಜೆಪಿ ಕಾನೂನು ಪ್ರಕೋಷ್ಟ ಮನವಿ

ದಾವಣಗೆರೆ, ಅ.8-ಕೇಂದ್ರ ಸರ್ಕಾರದಲ್ಲಿರುವವರನ್ನು ಭಯೋತ್ಪಾದಕರ ಹಿಂಬಾಲಕರು ಎಂದು ಅಸಂವಿಧಾನಿಕ ಪದ ಬಳಸಿ ತುಚ್ಛವಾಗಿ ಮಾತನಾಡಿರುವ ಡಿ. ಬಸವರಾಜ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಬಿಜೆಪಿಯ ಕಾನೂನು ಪ್ರಕೋಷ್ಟದಿಂದ ಎಸ್ಪಿ ಉಮಾ ಪ್ರಶಾಂತ್ ಅವರಿಗೆ ಮನವಿ ಸಲ್ಲಿಸಲಾಗಿದೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಡಿ. ಬಸವರಾಜ್ ಅವರು, ಅಂದು ಮಹಾತ್ಮ ಗಾಂಧೀಜಿ ಅವರನ್ನು ಅಮಾನುಷವಾಗಿ ಕೊಲೆಗೈದ ದೇಶದ ಮೊದಲ ಭಯೋತ್ಪಾದಕ, ನರ ಹಂತಕ ನಾಥೂರಾಮ್ ಗೋಡ್ಸೆ ಹಿಂಬಾಲಕರ ಕೈಯ್ಯಲ್ಲಿ ದೇಶದ ಆಡಳಿತವಿದೆ ಎಂದು ಪರೋಕ್ಷವಾಗಿ ದೇಶದ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರವನ್ನು ಅವಮಾನಿಸಿದ್ದಾರೆ.

ಈ ರೀತಿ ಪದ ಬಳಸಿರುವುದು ಅಸಂವಿಧಾನಿಕವಾಗಿದ್ದು, ಪ್ರಧಾನಿ ಹಾಗೂ ಭಾರತ ಸಂವಿಧಾನಕ್ಕೆ ಮಾಡಿದ ಅವಮಾನವಾಗಿದೆ. ಆದ್ದರಿಂದ ಬಸವರಾಜ್ ಹಾಗೂ ಆ ಸಮಯದಲ್ಲಿ ಹಾಜರಿದ್ದ ಇತರರ ವಿರುದ್ಧ ಐಸಿಸಿ ಕಾನೂನಿನಡಿ ಕ್ರಮ ಕೈಗೊಳ್ಳುವಂತೆ ವಿನಂತಿಸಲಾಗಿದೆ.

ಈ ಸಂದರ್ಭದಲ್ಲಿ ವಕೀಲರ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಬಿಜೆಪಿ ಕಾನೂನು ಪ್ರಕೋಷ್ಟದ ಜಿಲ್ಲಾ ಸಂಚಾಲಕ ಹೆಚ್. ದಿವಾಕರ್, ಕಾನೂನು ಪ್ರಕೋಷ್ಟದ ರಾಜ್ಯ ಸಮಿತಿ ಸದಸ್ಯರು ಹಾಗೂ ವಕೀಲರ ಸಹಕಾರ ಸಂಘದ ನಿರ್ದೇಶಕರೂ ಆದ ಎ. ಸಿ. ರಾಘವೇಂದ್ರ, ಜಿಲ್ಲಾ ಸಮಿತಿ ಸದಸ್ಯ ಹಾಗೂ ವಕೀಲರ ಸಹಕಾರ ಸಂಘದ ನಿರ್ದೇಶಕ ಎ. ಕೆ. ಹಾಲಪ್ಪ, ಕಾನೂನು ಪ್ರಕೋಷ್ಟದ ಉತ್ತರ ವಿಧಾನ ಸಭಾ ಕ್ಷೇತ್ರದ ಸಂಚಾಲಕ ಪಿ. ವಿ. ಶಿವಕುಮಾರ್ ಹಾಗೂ ನೋಟರಿ ನೀಲಕಂಠಯ್ಯ ಹಾಜರಿದ್ದರು.


ಚಿತ್ರ : ಜಿಗಳಿ ಪ್ರಕಾಶ್

# ಚಿತ್ರದುರ್ಗ: ಶೋಭಾಯಾತ್ರೆಯಲ್ಲಿ ಲಕ್ಷಾಂತರ ಜನ

ಚಿತ್ರದುರ್ಗ, ಅ.8- ನಗರದಲ್ಲಿ ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗ ದಳದ ವತಿಯಿಂದ ಪ್ರತಿಷ್ಠಾಪಿಸಿದ್ದ 18 ನೇ ವರ್ಷದ ಹಿಂದೂ ಮಹಾಗಣಪತಿ ವಿಸರ್ಜನೆ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಐತಿಹಾಸಿಕ ಶೋಭಾ ಯಾತ್ರೆಯಲ್ಲಿ ನಾಡಿನ ನಾನಾ ಭಾಗಗಳಿಂದ ಲಕ್ಷಾಂತರ ಜನ ಭಾಗವಹಿಸಿದ್ದರು. ಶ್ರೀರಾಮ, ಆಂಜನೇಯ, ಶಿವಾಜಿ ಅವರ ಪ್ರತಿಮೆಗಳು ಮೆರವಣಿಗೆಯಲ್ಲಿ ಗಮನ ಸೆಳೆದವು, ಮದಕರಿ ನಾಯಕ, ಒನಕೆ ಓಬವ್ವ, ಬಸವಣ್ಣ, ಅಂಬೇಡ್ಕರ್ ಸೇರಿದಂತೆ ಮತ್ತಿತರೆ ಸ್ಥಾಪಿತ ಪ್ರತಿಮೆಗಳಿಗೆ ಹೂವಿನ ಅಲಂಕಾರ ಮಾಡಲಾಗಿತ್ತು.


ಅಲ್ಲದೆ ಇಡೀ ನಗರ ನವ ವಧುವಿನಂತೆ ಸಿಂಗಾರ ಗೊಂಡಿತ್ತು, ನಾಲ್ಕು ಬೃಹತ್ ಡಿಜೆಗಳ ಸಂಗೀತಕ್ಕೆ ಯುವಕರು ಹುಚ್ಚೆದ್ದು ಕುಣಿದು ಸಂಭ್ರಮಿಸಿದರು, ರಾತ್ರಿ 11 ಗಂಟೆ ನಂತರ ಚಂದವಳ್ಳಿ ತೋಟದಲ್ಲಿರುವ ನೀರಿನ ಹೊಂಡದಲ್ಲಿ ಮಹಾಗಣಪತಿ ಯನ್ನು ವಿಸರ್ಜನೆ ಮಾಡಲಾಯಿತು.

# ಮಲೇಬೆನ್ನೂರು : 'ನನ್ನ ಮಣ್ಣು ನನ್ನ ದೇಶ' ಅಭಿಯಾನ



ಮಲೇಬೆನ್ನೂರು, ಅ. 8 - ಇಲ್ಲಿನ ಪುರಸಭೆ ವತಿಯಿಂದ ಪಟ್ಟಣದಲ್ಲಿ 'ನನ್ನ ಮಣ್ಣು ನನ್ನ ದೇಶ' ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಸ್ವತಂತ್ರ ಅಮೃತ ಮಹೋತ್ಸವದ ಅಂಗವಾಗಿ ದೇಶಾದ್ಯಂತ ಅ. 30 ರವರೆಗೆ ನಡೆಯುತ್ತಿರುವ ನನ್ನ ಮಣ್ಣು ನನ್ನ ದೇಶ ಅಭಿಯಾನದ ಪ್ರಯುಕ್ತ ಸಾರ್ವಜನಿಕರು ಮನೆ ಮನೆಗಳಿಂದ ಅಕ್ಕಿ ಮತ್ತು ಮಣ್ಣನ್ನು ತಂದು ಅಮೃತ ಕಳಶಕ್ಕೆ ನೀಡಿದರು. ಇದನ್ನು ದೆಹಲಿಯ ಲ್ಲಿರುವ ಕರ್ತವ್ಯ ಪತ ಇಂಡಿಯಾ ಗೇಟ್ ಬಳಿ ಹೊಸದಾಗಿ ನಿರ್ಮಿಸುತ್ತಿರುವ ಅಮೃತ ಮಹೋ ತ್ಸವದ ಸ್ಮಾರಕಕ್ಕೆ ಬಳಕೆ ಮಾಡಲಾಗುವುದು. ಜಾಥಾದಲ್ಲಿ 'ಮಣ್ಣಿಗೆ ನಮನ' 'ವೀರರಿಗೆ ವಂದನೆಗಳು ಎಂದು ಘೋಷಣೆ ಕೂಗಲಾ ಯಿತು. ಪುರಸಭೆಯ ಅಧಿಕಾರಿಗಳಾದ ಉಮೇಶ್, ಶಿವರಾಜ್ ಮತ್ತು ಮುಖಂಡ ಮುದೇಗೌಡ್ರ ತಿಪ್ಪೇಶ್ ಮತ್ತಿತರರು ಭಾಗವಹಿಸಿದ್ದರು.

# ವಕೀಲರ 'ಸಿಂಬಲ್' ಅಕ್ರಮ ಬಳಕೆ; ಕ್ರಮಕ್ಕೆ ಬಿಜೆಪಿ ಕಾನೂನು ಪ್ರಕೋಷ್ಟ ಆಗ್ರಹ



ದಾವಣಗೆರೆ,ಅ.8- ವಕೀಲರ ಸಮುದಾಯಕ್ಕೆ ಸೇರದ, ವಕೀಲ ವೃತ್ತಿಗೆ ಸಂಬಂಧವಿರದ ವ್ಯಕ್ತಿಗಳು ತಮ್ಮ ವಾಹನಗಳ ಮೇಲೆ ವಕೀಲರ 'ಸಿಂಬಲ್' ಅನ್ನು ಅನಧಿಕೃತವಾಗಿ ಬಳಸುತ್ತಿದ್ದಾರೆ. ಇಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಬಿಜೆಪಿ ಕಾನೂನು ಪ್ರಕೋಷ್ಟ ಒತ್ತಾಯಿಸಿದೆ.

ಹೀಗೆ ವಕೀಲ ವೃತ್ತಿಗೆ ಸಂಬಂಧವಿರದ ವ್ಯಕ್ತಿಗಳು ಸಿಂಬಲ್ ದುರ್ಬಳಕೆ ಮಾಡಿಕೊಂಡು ಓಡಾಡುತ್ತಿದ್ದಾರೆ. ಇಂತಹ ನಕಲಿ ವಕೀಲರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಜಿಲ್ಲಾ ರಕ್ಷಣಾಧಿಕಾರಿಗಳನ್ನು ಬಿಜೆಪಿ ಕಾನೂನು ಪ್ರಕೋಷ್ಟದ ರಾಜ್ಯ ಸಮಿತಿ ಸದಸ್ಯ ಎ.ಸಿ.ರಾಘವೇಂದ್ರ ಮತ್ತು ಜಿಲ್ಲಾ ಸಂಚಾಲಕ ಹೆಚ್. ದಿವಾಕರ್ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಕೀಲರ ಸಹಕಾರ ಸಂಘದ ನಿರ್ದೇಶಕ ಎ.ಕೆ. ಹಾಲಪ್ಪ, ಉತ್ತರ ವಿಧಾನಸಭಾ ಕ್ಷೇತ್ರದ ಸಂಚಾಲಕ ಪಿ.ವಿ.ಶಿವಕುಮಾರ್ ಹಾಗೂ ನೋಟರಿ ನೀಲಕಂಠಯ್ಯ ಹಾಜರಿದ್ದರು.

# ಹೊಸ ಪಲ್ಸರ್ ಎನ್ 150 ಬಿಡುಗಡೆ




ದಾವಣಗೆರೆ, ಅ. 8- ನಗರದಲ್ಲಿ ಹೊಸ ಪಲ್ಸರ್ ಎನ್ 150 ಬೈಕನ್ನು ಎಂಜಿನಿಯರ್ ಅಂಬರ್‌ಕರ್ ಮತ್ತು ರಾಜೀವ್ ಓಸ್ವಾಲ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾಲೀಕರಾದ ರಮೇಶ್ ಜೈನ್ ಮತ್ತು ವಿನೋದ್ ಜೈನ್ ಉಪಸ್ಥಿತರಿದ್ದರು.

# ದೀರ್ಘ ಸಂಘರ್ಷದ ಹಾದಿಯಲ್ಲಿ ಇಸ್ರೇಲ್ ಗಾಜಾ ಮೇಲೆ ತೀವ್ರ ದಾಳಿ

ಟೆಲ್ ಅವೀವ್, ಅ. 8 – ಹಮಾಸ್ ನಡೆಸಿದ ದಾಳಿಯಲ್ಲಿ ಹತರಾದ ಇಸ್ರೇಲ್ ನಾಗರಿಕರ ಸಂಖ್ಯೆ 600ಕ್ಕೆ ತಲುಪಿದೆ. ಹಮಾಸ್ ಉಗ್ರರನ್ನು ಹಿಮ್ಮೆಟ್ಟಿಸಲು ಇಸ್ರೇಲ್‌ನ ಕೆಲ ಪ್ರದೇಶಗಳಲ್ಲಿ ತೀವ್ರ ಹೋರಾಟ ನಡೆಸಲಾಗುತ್ತಿದೆ. ಈ ನಡುವೆ ಉತ್ತರ ಇಸ್ರೇಲ್‌ನಲ್ಲಿ ಲೆಬನಾನ್‌ನ ಹಿಜ್ಬುಲ್ಲಾ ಉಗ್ರರು ದಾಳಿ ನಡೆಸಿದ್ದು, ಇದು ಗಡಿ ಸಂಘರ್ಷದ ಆತಂಕ ಹೆಚ್ಚಿಸಿದೆ.

ಗಾಜಾದಿಂದ ಹಮಾಸ್ ಉಗ್ರರು ದಾಳಿ ಆರಂಭಿಸಿದ 24 ಗಂಟೆಗಳ ನಂತರವೂ ಹೋರಾಟ ಅಂತ್ಯವಾಗಿಲ್ಲ. ಇಸ್ರೇಲ್‌ನ ಕನಿಷ್ಠ 600 ಜನರು ಸಾವನ್ನಪ್ಪಿದ್ದಾರೆ. ಗಾಜಾದಲ್ಲಿ 300ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ.

ಭಾನುವಾರದಂದು ಇಸ್ರೇಲ್ ಸಮರ ಸಾರಿರುವುದನ್ನು ಅಧಿಕೃತವಾಗಿ ಘೋಷಿಸಿದೆ. ಕಳೆದ ನಾಲ್ಕು ದಶಕಗಳಲ್ಲಿ ಲೆಬನಾನ್ ಹಾಗೂ ಗಾಜಾ ಮೇಲೆ ಇಸ್ರೇಲ್ ಪ್ರಮುಖ ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದೆ. ಆದರೆ, ಎಂದೂ ಔಪಚಾರಿಕವಾಗಿ ಸಮರ ಘೋಷಿಸಿರಲಿಲ್ಲ.

ಇಸ್ರೇಲ್ ಘೋಷಣೆ ಕೇವಲ ಸಾಂಕೇತಿಕವಾಗಿದೆ. ಆದರೆ, ಸರ್ಕಾರ ಹೆಚ್ಚು ದೀರ್ಘವಾದ, ತೀವ್ರವಾದ ಹಾಗೂ ಗಣನೀಯ ಸಮಯದ ಹೋರಾಟದಲ್ಲಿ ತೊಡಗುವುದನ್ನು ಸೂಚಿಸಿದೆ ಎಂದು ಇಸ್ರೇಲ್ ಡೆಮಾಕ್ರಸಿ ಇನ್‌ಸ್ಟಿಟ್ಯೂಟ್ ಸಂಸ್ಥೆಯ ಮುಖ್ಯಸ್ಥ ಜೊಹನಾನ್ ಪ್ಲೆಸ್ನರ್ ಹೇಳಿದ್ದಾರೆ.

ಗಾಜಾ ಮೇಲೆ ಇಸ್ರೇಲ್ ಭೂ ದಾಳಿ ನಡೆಸಲಿದೆಯೇ ಎಂಬ ಪ್ರಶ್ನೆ ಈಗ ಪ್ರಮುಖವಾಗಿದೆ. ಈ ರೀತಿಯ ದಾಳಿಗಳು ಸಾಕಷ್ಟು ಸಾವು - ನೋವುಗಳಿಗೆ ಕಾರಣವಾಗಲಿವೆ.

ಈ ಸಂಘರ್ಷದಲ್ಲಿ ನಾಗರಿಕರು ತೀವ್ರ ಆಘಾತಕ್ಕೀಡಾಗಿದ್ದಾರೆ. ಇಸ್ರೇಲ್‌ನ ಕನಿಷ್ಠ 600 ಜನ ಸಾವನ್ನಪ್ಪಿರುವುದನ್ನು ಅಧಿಕಾರಿಗಳು ಖಚಿತಪಡಿಸಿದ್ದಾರೆ. ಇವರಲ್ಲಿ 44 ಸೈನಿಕರಿದ್ದಾರೆ. ಗಾಜಾದಲ್ಲಿ 313 ಜನ ಸಾವನ್ನಪ್ಪಿರುವುದಾಗಿ ಅಲ್ಲಿನ ಅಧಿಕಾರಿಗಳು ಹೇಳಿದ್ದಾರೆ.

400 ಉಗ್ರರನ್ನು ಹೊಡೆದುರುಳಿಸಿರುವುದಾಗಿ ಹಾಗೂ ಹಲವರನ್ನು ಬಂಧಿಸಿರುವುದಾಗಿ ಇಸ್ರೇಲ್ ಅಧಿಕಾರಿಗಳು ಹೇಳಿದ್ದಾರೆ.

ಗಾಜಾದಲ್ಲಿನ 426 ಕೇಂದ್ರಗಳನ್ನು ಗುರಿಯಾಗಿಟ್ಟುಕೊಂಡು ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೈನಿಕ ಅಧಿಕಾರಿಗಳು ತಿಳಿಸಿದ್ದಾರೆ.

20 ಸಾವಿರಕ್ಕೂ ಹೆಚ್ಚು ಪ್ಯಾಲೆಸ್ತೇನ್ ನಾಗರಿಕರು ಗಾಜಾ ಗಡಿಯನ್ನು ಬಿಟ್ಟು ಮಧ್ಯ ಭಾಗದ ಪ್ರದೇಶಗಳಿಗೆ ತೆರಳಿದ್ದಾರೆ.

## ಐಕ್ಯತಾ ಸರ್ಕಾರಕ್ಕೆ ಇಸ್ರೇಲ್ ಪರಿಶೀಲನೆ

**(1ನೇ ಪುಟದಿಂದ)** ಉಭಯ ನಾಯಕರೂ ಸರ್ಕಾರ ಸೇರುವ ಬಗ್ಗೆ ಒಲವು ವ್ಯಕ್ತ ಪಡಿಸಿದ್ದಾರೆ. ಆದರೆ, ತೀವ್ರ ಬಲಪಂಥೀಯ ಸಚಿವರಾದ ಬೆಜಲೆಲ್ ಸ್ಮೊಟ್ರಿಚ್ ಹಾಗೂ ಇಟಮರ್ ಬೆನ್ ಗ್ವಿರ್ ಅವರನ್ನು ಸಂಪುಟದಿಂದ ತೆಗೆದು ಹಾಕಬೇಕೆಂದು ಲ್ಯಾಪಿಡ್ ಪಟ್ಟು ಹಿಡಿದ್ದಾರೆ. ಗ್ಯಾಟ್ಜ್ ಅವರು ಈ ಇಬ್ಬರು ನಾಯಕರಿದ್ದರೂ ಸಂಪುಟ ಸೇರುವುದಾಗಿ ತಿಳಿಸಿದ್ದಾರೆ.

# 10-12ನೇ ತರಗತಿಯ ಎರಡು ಪರೀಕ್ಷೆ ಕಡ್ಡಾಯವಲ್ಲ

**(1ನೇ ಪುಟದಿಂದ)** ಅಂಕಗಳನ್ನು ಉಳಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ಇದೇನು ಮಂಡಳಿ ಪರೀಕ್ಷೆ ಸುಧಾರಣೆಗೆ ನಡೆಸಲಾಗುತ್ತಿರುವ ಮೊದಲ ಪ್ರಯತ್ನವಲ್ಲ.

ಈ ಹಿಂದೆ 2009ರಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿಯನ್ನು ಜಾರಿಗೆ ತರಲಾಗಿತ್ತು. 2017ರಲ್ಲಿ ಮತ್ತೆ ಹಳೆಯ ಪದ್ಧತಿ ಜಾರಿಗೆ ತರಲಾಗಿತ್ತು.

ರಾಜಸ್ಥಾನದ ಕೋಟಾದಲ್ಲಿ ದಾಖಲೆ ಸಂಖ್ಯೆಯ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಶ್ನೆಗೆ ಉತ್ತರಿಸಿರುವ ಸಚಿವರು, ಇದು ಸೂಕ್ಷ್ಮ ವಿಷಯವಾಗಿದೆ. ನಮ್ಮ ಮಕ್ಕಳು ಜೀವ ಕಳೆದುಕೊಳ್ಳಬಾರದು. ಅವರಿಗೆ ಒತ್ತಡ ಮುಕ್ತ ವಾತಾವರಣ ಕಲ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದಿದ್ದಾರೆ. ಡಮ್ಮಿ ಶಾಲೆಗಳ ಸಮಸ್ಯೆ ಕಡೆಗಣಿಸಲಾಗದು. ಈ ಬಗ್ಗೆ ಗಂಭೀರ ಚರ್ಚೆ ನಡೆಸುವ ಸಮಯ ಬಂದಿದೆ ಎಂದೂ ಸಚಿವರೂ ಹೇಳಿದ್ದಾರೆ.

ಪ್ರತಿ ವರ್ಷ ಜೆ.ಇ.ಇ. ಹಾಗೂ ನೀಟ್ ರೀತಿಯ ಪರೀಕ್ಷೆಗಳಿಗಾಗಿ ಕೋಟಾಗೆ ಎರಡು ಲಕ್ಷ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಈ ವರ್ಷ ಕೋಟಾದಲ್ಲಿ ಇದುವರೆಗೂ 23 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನೀಟ್ ಹಾಗೂ ಜೆಇಇ ಆಕಾಂಕ್ಷಿಗಳು ತಮ್ಮ ರಾಜ್ಯಗಳಲ್ಲಿರುವ ಶಾಲೆಗಳಿಗೆ ದಾಖಲಾಗುತ್ತಾರೆ. ನಂತರ ಕೋಟಾದ ಕೋಚಿಂಗ್ ತರಗತಿಗಳಿಗೆ ಸೇರುತ್ತಾರೆ. ಅವರು ಶಾಲೆಗಳಿಗೆ ಪೂರ್ಣಕಾಲಿಕವಾಗಿ ಹಾಜರಾಗದೇ, ನೇರವಾಗಿ ಮಂಡಳಿ ಪರೀಕ್ಷೆಗೆ ಬರುತ್ತಿದ್ದಾರೆ.

ಈ ಡಮ್ಮಿ ಶಾಲೆಗಳ ಬಗ್ಗೆ ಹಲವಾರು ಪರಿಣಿತರು ಎಚ್ಚರಿಕೆ ನೀಡಿದ್ದಾರೆ. ಶಾಲೆಗಳಿಗೆ ವಿದ್ಯಾರ್ಥಿಗಳು ಬರದೇ ಇದ್ದರೆ ಅವರ ವೈಯಕ್ತಿಕ ಬೆಳವಣಿಗೆ ಆಗುವುದಿಲ್ಲ. ಏಕಾಂಗಿಗಳಾಗಿ ಒತ್ತಡಕ್ಕೆ ಸಿಲುಕುತ್ತಾರೆ ಎಂದು ತಿಳಿಸಿದ್ದಾರೆ.

# ಸ್ಥಳೀಯ ಯುವಕರಿಗೆ ಉದ್ಯೋಗ ನೀಡುವುದೇ ಪ್ರಥಮ ಆದ್ಯತೆ

## ರಾಣೇಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ



ರಾಣೇಬೆನ್ನೂರು, ಅ.8- ಸ್ಥಳೀಯ ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡಲು ಕಂಪನಿ ಯಾವುದೇ ರೀತಿಯಿಂದ ಮೀನಾಮೇಷ ಎಣಿಸಬಾರದು. ರೈತರ ಫಲವತ್ತಾದ ಭೂಮಿ ಪಡೆದು ಹಾಗೂ ಇಲ್ಲಿಯ ಎಥೇಚ್ಛ ನೀರನ್ನು ಪಡೆದು ಸ್ಥಾಪನೆಗೊಂಡಿರುವ ಕಂಪನಿ ಸ್ಥಳೀಯ ರೈತರ ಮಕ್ಕಳಿಗೆ, ಕೃಷಿ ಕಾರ್ಮಿಕರ ಮಕ್ಕಳಿಗೆ ಉದ್ಯೋಗ ನೀಡುವುದೇ ಕಂಪನಿಯ ಪ್ರಥಮ ಆದ್ಯತೆ ಆಗಬೇಕು ಎಂದು ಶಾಸಕ ಪ್ರಕಾಶ್ ಕೋಳಿವಾಡ ಹೇಳಿದರು.

ಹನುಮನಹಳ್ಳಿ ಹತ್ತಿರ ನಿರ್ಮಾಣಗೊಂಡಿರುವ ಗೋಲ್ಡನ್ ಹ್ಯಾಚರೀಸ್ ಪ್ರೈ. ಲಿ.ನ ಕೋಳಿ ಮಾಂಸ ತಯಾರಿಕಾ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೈಗಾರಿಕೆಗಳು ಬೇಕು. ನಾನೇ ನನ್ನ ಪಿ.ಕೆ.ಕೆ. ಸಂಸ್ಥೆಯ ಮುಖಾಂತರ ಹತ್ತಾರು ಉದ್ಯೋಗ ಮೇಳ ಮಾಡಿ, ಸ್ಥಳೀಯ ಸಾವಿರಾರು ನಿರುದ್ಯೋಗಿ ಯುವಕರಿಗೆ ದೂರದ ಫ್ಯಾಕ್ಟರಿಗಳಲ್ಲಿ ಕೆಲಸ ಕೊಡಿಸಿದ್ದೇನೆ. ಇಂತಹದರಲ್ಲಿ ನನ್ನ ಕ್ಷೇತ್ರದಲ್ಲಿ ಸ್ಥಾಪನೆಯಾಗಿರುವ ಈ ಕಂಪನಿಯಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ದೊರಕಿಸಿದಿದ್ದರೆ ನಾನು ಶಾಸಕನಾಗಿ ಫಲವೇನು ? ಎಂದು ಪ್ರಶ್ನಿಸಿದರು.

ಇದೇ ಸಂದರ್ಭದಲ್ಲಿ ಕಂಪನಿ ಪ್ರತಿನಿಧಿಗಳೊಂದಿಗೆ ಉದ್ಯೋಗಾಕಾಂಕ್ಷಿಗಳೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ರೈತ ಮುಖಂಡರ ಸಮ್ಮುಖದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸ್ಥಳೀಯ ಯುಕರಿಗೆ ಉದ್ಯೋಗ ನೀಡುವ ಬಗ್ಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ರಾಜ್ಯ ರೈತ ಸಂಘಟನೆಯ ರವೀಂದ್ರಗೌಡ ಎಫ್.ಪಾಟೀಲ, ಈರಣ್ಣ ಹಲಗೇರಿ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ, ಕಂಪನಿ ತನ್ನ ಮೊಂಡುತನ ಪ್ರದರ್ಶಿಸಿದೆ. ಸ್ಥಳೀಯ ಯುವಕರಿಗೇನೆ ಉದ್ಯೋಗ ನೀಡಬೇಕೆಂದು ಠರಾವು ಪಾಸು ಮಾಡಿದ್ದಲ್ಲದೆ, ಉದ್ಯೋಗಾಕಾಂಕ್ಷಿಗಳಿಂದ ಸಾವಿರಾರು ಅರ್ಜಿ ಸ್ವೀಕರಿಸಲಾಯಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ 'ನಮ್ಮ ಭೂಮಿ, ನಮ್ಮ ಜಲ, ಉದ್ಯೋಗ ಪಡೆಯುವುದು ನಮ್ಮ ಹಕ್ಕು ಎಂದರಲ್ಲದೆ, ಸ್ಥಳೀಯರಿಗೆ ಉದ್ಯೋಗ ಕೊಡಿಸುವ ತನಕ ವಿರಮಿಸುವುದಿಲ್ಲ ಎಂದರು. ಕಂಪನಿ ಮಾತಿಗೆ ತಪ್ಪಿ ನಡೆದರೆ ಕಳೆದ 25 ನೇ ತಾರೀಖಿನಂದು ನಡೆದ ಪ್ರತಿಭಟನೆ ಮತ್ತೆ ಮರುಕಳಸ ಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಮಾತನಾಡಿ, ನಾವು ಕಂಪನಿ ವಿರೋಧಿಗಳಲ್ಲ, ಕಂಪನಿ ನಡೆಸುತ್ತಿರುವ ಕಂಪನಿಯ ಮಾಲೀಕನಿಗೆ ಗೊತ್ತಿಲ್ಲದೆ ಅಕ್ರಮ ವ್ಯವಹಾರ ಚಟುವಟಿಕೆಗಳ ವಿರೋಧಿಗಳು ಎಂದರಲ್ಲದೆ, ಕಳ್ಳ ಕಾಕರನ್ನು ಈ ಕೂಡಲೇ ಹೊರಹಾಕಬೇಕೆಂದರು.

ಅಧ್ಯಕ್ಷತೆಯನ್ನು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಸೈಯದ್ ಫಹಾದ್ ವಹಿಸಿದ್ದರು. ವೇದಿಕೆಯ ಮೇಲೆ ಚಂದ್ರಣ್ಣ ಬೇಡರ, ಜನರಲ್ ಮ್ಯಾನೇಜರ್ ಲೋಕೇಶ್, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೇಖಾ ಎಂ. ಪಟ್ಟಕ್ಕನವರ, ಉಪಾಧ್ಯಕ್ಷೆ ಶ್ರೀಮತಿಗೆ ಚಂದ್ರಮ್ಮ ಹಿರೇಮಠದ, ಅಶೋಕ ಗಂಗನಗೌಡ್ರ, ಹೆಚ್.ಆರ್.ಡಿ. ಭೀಮೇಶ ಉಪಸ್ಥಿತರಿದ್ದರು.

ಮೂರು ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ಈ ಸಂದರ್ಭದಲ್ಲಿ ಹಾಜರಿದ್ದು ತಮ್ಮ ಅರ್ಜಿ ಸಲ್ಲಿಸಿದರು. ನಿಯಮಾವಳಿಗಳ ಪ್ರಕಾರ ಸಂದರ್ಶನಕ್ಕೆ ಕರೆಯಲಾಗುವುದೆಂದು ಕಂಪನಿ ಎಂ.ಡಿ. ತಿಳಿಸಿದರು.

# ರೋಟರಿಯಿಂದ ಪೊಲೀಸ್ ಇಲಾಖೆಯ ಮಹಿಳಾ ಸಿಬ್ಬಂದಿಗಳಿಗೆ ಆರೋಗ್ಯ ಶಿಬಿರ



ದಾವಣಗೆರೆ, ಅ. 8- ಜಿಲ್ಲಾ ಪೊಲೀಸ್ ಇಲಾಖೆಯ ಎಲ್ಲಾ ಮಹಿಳಾ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿಯ ಕುಟುಂಬದ ಮಹಿಳಾ ಸದಸ್ಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ರೋಟರಿ ಕ್ಲಬ್ ದಾವಣಗೆರೆ ಮತ್ತು ಸುಕ್ಷೇಮ ಆಸ್ಪತ್ರೆ ವತಿಯಿಂದ ನಡೆಸಲಾಯಿತು.

ಸುಕ್ಷೇಮ ಆಸ್ಪತ್ರೆಯಲ್ಲಿರುವ ರೋಟರಿ ಕ್ಲಬ್ ದಾವಣಗೆರೆ ಕ್ಯಾನ್ಸರ್ ವೆಲ್‌ನೆಸ್ ಸೆಂಟರ್ ಫಾರ್ ವುಮನ್‌ನಲ್ಲಿ ನಿನ್ನೆ ಆಯೋಜಿಸಿದ್ದ ಆರೋಗ್ಯ ಶಿಬಿರವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಉದ್ಘಾಟಿಸಿ ಮಾತನಾಡುತ್ತಾ, ಮಹಿಳಾ ಪೊಲೀಸ್ ಸಿಬ್ಬಂದಿಗಳು ಕುಟುಂಬ ಮತ್ತು ಕರ್ತವ್ಯದ ಜವಾಬ್ದಾರಿಗಳನ್ನು ಹೊಂದಿದ್ದಾರೆ ಮತ್ತು ಅವರಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆಗೆ ಹೋಗಲು ಸಮ ಯದ ಕೊರತೆಯಿಂ ದಾಗಿ ಅವಕಾಶಗಳು ಕಡಿಮೆ ಎಂದು ಹೇಳಿದರು.

ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಶ್ರೀಶೈಲ ಬ್ಯಾಡಗಿ ಹಾಗೂ ಕ್ಯಾನ್ಸರ್ ತಜ್ಞ ಡಾ. ಸುನಿಲ್ ಬ್ಯಾಡಗಿ, ಸ್ತ್ರೀರೋಗ ತಜ್ಞರಾದ ಡಾ. ಶೋಭಾ ಧನಂಜಯ ಅವರೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ರೋಟರಿ ಸಂಸ್ಥೆ ದಾವಣಗೆರೆಯ ಕಾರ್ಯದರ್ಶಿ ಶ್ರೀಮತಿ ಸುನೀತಾ ಮೃತುಂಜಯ, ಇನ್ನರ್‌ವ್ಹೀಲ್ ಅಧ್ಯಕ್ಷೆ ಶ್ರೀಮತಿ ಆಶಾ ಜಗದೀಶ್ ಬೇತೂರ್, ಹಿರಿಯ ಸದಸ್ಯರಾದ ಪಿ.ಬಿ. ಪ್ರಕಾಶ್, ಆರ್. ಟಿ. ಮೃತ್ಯುಂಜಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳಾದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಸರಗಿ, ಉಪ ಪೊಲೀಸ್ ವರಿಷ್ಠಾಧಿಕಾರಿ ಪ್ರಕಾಶ್, ಮಲ್ಲೇಶ್ ಮತ್ತು ಇತರರು ಉಪಸ್ಥಿತರಿದ್ದರು.

# ಸಂಕೀರ್ಣ ಕ್ಷೇತ್ರದ ಅನನ್ಯ ಪ್ರತಿಭೆ ಸತ್ಯಭಾಮಗೆ ಸಿ.ಜಿ.ಕೆ. ಪ್ರಶಸ್ತಿ

ಬೆಂಗಳೂರಿನ ಸುರೇಶ್ ಗೆಳೆಯರ ತಂಡದವರು ತಮ್ಮ ಗುರುಗಳ ಸ್ಮರಣೆಗಾಗಿ, ಪ್ರತಿ ವರ್ಷ ಕರ್ನಾಟಕ ರಂಗ ಪರಿಷತ್ತು ವತಿಯಿಂದ ಪ್ರತಿ ಜಿಲ್ಲೆಯಲ್ಲೂ ಕಾರ್ಯಕ್ರಮ ಹಮ್ಮಿಕೊಂಡು, ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸೇವೆಗೈದ ಅನನ್ಯ ಪ್ರತಿಭೆಗಳಿಗೆ, 'ಸಿ. ಜಿ.ಕೆ.ಪ್ರಶಸ್ತಿ' ನೀಡಿ ಪುರಸ್ಕರಿಸುತ್ತಾ ಬಂದಿದ್ದಾರೆ. ಅಂತೆಯೇ ದಾವಣಗೆರೆ ಜಿಲ್ಲೆಯಲ್ಲೂ ಪರಿಷತ್ತಿನ ರಾಜ್ಯ ಘಟಕದ ಉಪಾಧ್ಯಕ್ಷರಾದ ಎನ್.ಎಸ್. ರಾಜುರವರು, ಇದೇ ದಿನಾಂಕ 9ರ ಸೋಮವಾರ ನಗರದ ಕುವೆಂಪು ಕನ್ನಡ ಭವನದಲ್ಲಿ ಪರಿಷತ್ತು ಆಯೋಜಿಸಿರುವ ಸಿ.ಜಿ.ಕೆ. ಸ್ಮರಣೋತ್ಸವದಲ್ಲಿ ಸಿ.ಜಿ.ಕೆ. ಪ್ರಶಸ್ತಿಯನ್ನು ನಗರದ ಕ್ರಿಯಾಶೀಲ ಮಹಿಳಾ ಸಾಹಿತಿ, ರಂಗ ಭೂಮಿಯ ನಟಿ ಹಾಗೂ ಸಂಘಟಕರೂ, ಸರಳ ಸೌಜನ್ಯದ ಸಾಕಾರವೆನಿಸಿರುವ ಶ್ರೀಮತಿ ಹೆಚ್. ಕೆ. ಸತ್ಯಭಾಮ ಮಂಜುನಾಥ್ ಅವರಿಗೆ ಪ್ರದಾನ ಮಾಡಲು ತೀರ್ಮಾನಿಸಿರುವುದು ಸಂತಸದ ಸಂಗತಿ.

ಕಲ್ಲಿನಕೋಟೆಯ ಐತಿಹಾಸಿಕ ಜಿಲ್ಲೆ ಚಿತ್ರದುರ್ಗದ ಹಿರಿಯೂರಿನಲ್ಲಿ ಕೃಷಿಕರಾದ ಹೆಚ್.ವಿ. ಕೃಷ್ಣಪ್ಪ ನಾಯಕ ಮತ್ತು ಜಯಮ್ಮ ದಂಪತಿಗಳ ಪುತ್ರಿಯಾಗಿ 1962 ಆಗಸ್ಟ್ 26ರಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಸತ್ಯಭಾಮರವರು, ಮೂರನೇ ತರಗತಿಯಲ್ಲಿರುವಾಗಲೇ ಹನುಮಂತ ಠಾಕೂರ್ ಮಾಸ್ತರ್‌ರಿಂದ ಕಲಿತ ಹಾಡನ್ನು ಊರಲ್ಲಿ ಆಡುವ ನಾಟಕಗಳಲ್ಲಿ ಗೆಳತಿಯರೊಂದಿಗೆ ಪ್ರಾರ್ಥನೆ ಗೀತೆ ಹಾಡುತ್ತಾ, ಶಾಲಾ ರಜಾ ದಿನಗಳಲ್ಲಿ ಅವ್ವನ ತವರುಮನೆ ಅಜ್ಜಿಯ ಊರಿಗೆ ಹೋದಾಗ, ಗ್ರಾಮದ ಕರಿಯಮ್ಮನ ಗುಡಿ ಕಟ್ಟೆಮೇಲೆ ನಡೆಯುತ್ತಿದ್ದ ನಾಟಕಗಳ ತಾಲೀಮುಗಳನ್ನು ನೋಡುತ್ತಾ, ಪ್ರದರ್ಶನಗಳನ್ನು ವೀಕ್ಷಿಸುತ್ತಾ ಬಂದ ಇವರಿಗೆ ಸಹಜವಾಗಿಯೇ ರಂಗಭೂಮಿಯ ನಂಟು ಒಲಿದು ಬಂದಿತು. ಬಾಲ್ಯದಲ್ಲಿಯೇ ಪತ್ರಿಕೆ ಹಾಗೂ ಮಾಸಿಕ ಪುಸ್ತಕಗಳನ್ನು ಓದುತ್ತಾ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡರು. ಹೀಗೆ ಸಾಹಿತ್ಯ, ಸಂಗೀತ, ರಂಗಭೂಮಿ ಚಟುವಟಿಕೆಗಳಲ್ಲೂ ಕ್ರಿಯಾಶೀಲರಾಗಿ ಉಜ್ವಲ ಪ್ರತಿಭೆಯನ್ನು ರೂಪಿಸಿಕೊಂಡರು.



ವಿದ್ಯಾಭ್ಯಾಸ ಮುಗಿಯುತ್ತಲೇ ಬ್ಯಾಂಕ್ ಉದ್ಯೋಗಿಯಾಗಿ ಕೆಲಸಕ್ಕೆ ಸೇರಿದ ಸತ್ಯಭಾಮ ರವರು, 32 ವರ್ಷಗಳ ಕಾಲ ಬ್ಯಾಂಕ್ ನಲ್ಲಿ ಸೇವೆ ಸಲ್ಲಿಸಿ, ತಮ್ಮ ಐವತ್ತನೇ ವಯಸ್ಸಿನಲ್ಲಿ ದಾವಣಗೆರೆಯ ಕಾರ್ಪೊರೇಷನ್ ಬ್ಯಾಂಕ್ ಅಸಿಸ್ಟೆಂಟ್ ಮ್ಯಾನೇಜರ್ ವೃತ್ತಿಯಿಂದ ಸ್ವಯಂ ನಿವೃತ್ತರಾದರು, ನಂತರ ಸಂಗೀತ, ಸಾಹಿತ್ಯ, ರಂಗಭೂಮಿ, ಸಮಾಜಸೇವಾ ಕಾರ್ಯಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ ಕೊಂಡರು. ಮನೆತನಕ್ಕೆ ಹಿರಿಯ ಮಗಳಾಗಿ, ಹಿರಿಯ ಸೊಸೆಯಾಗಿ, ಉದ್ಯೋಗಸ್ಥ ಮಹಿಳೆಯಾಗಿ, ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಎಲ್ಲರ ಪ್ರೀತಿ, ಗೌರವಕ್ಕೆ ಪಾತ್ರರಾಗಿದ್ದಾರೆ. ರಂಗಭೂಮಿಯ ಸಂಘಟಕರೂ, ನಟಿ ಹಾಗೂ ಗಾಯಕಿಯೂ ಆಗಿರುವ ಸತ್ಯಭಾಮ ರವರು, ಮಕ್ಕಳಿಗೆ ಬೇಸಿಗೆ ಶಿಬಿರ, ಸಂಗೀತ ಶಿಬಿರ, ರಂಗಭೂಮಿ ಶಿಬಿರಗಳನ್ನು ನಡೆಸಿ, ಮಕ್ಕಳಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಯಶಸ್ಸು ಕಂಡಿದ್ದಾರೆ. 'ಒನಕೆ ಓಬವ್ವ', 'ಕಿತ್ತೂರು ಚೆನ್ನಮ್ಮ', 'ಹೇಮರೆಡ್ಡಿ ಮಲ್ಲಮ್ಮ' ಸನ್ನಿವೇಶಗಳನ್ನು ಏಕಪಾತ್ರಾಭಿನಯದ ಮೂಲಕ ಪ್ರದರ್ಶನ ನೀಡಿ, ಉತ್ತಮ ಪ್ರತಿಭೆ ತೋರಿ ಜನ-ಮನ ಸೆಳೆದಿದ್ದಾರೆ.

ಹವ್ಯಾಸಿ ಕಲಾ ತಂಡ, ವನಿತಾ ಭೂಮಿಕಾ ರಂಗವೇದಿಕೆ, ವನಿತಾ ಸಮಾಜ ಕದಳಿ ವೇದಿಕೆ, ಸೇರಿದಂತೆ ಅನೇಕ ಕಲಾ ಸಂಸ್ಥೆಗಳಿಂದ 'ಬಾವಿಯಲ್ಲಿ ಬಿದ್ದ ಭವಣೆ' ನಾಟಕದಲ್ಲಿ ರಾಜಕಾರಣಿ ಪಾತ್ರ, 'ಮ್ಯಾಡ್ ಮ್ಯಾಡ್ ಮ್ಯಾಡ್ ವರ್ಲ್ಡ್' ನಲ್ಲಿ ಜವಾನ, 'ಕಲ್ಲನಕೆರೆ ಮಲ್ಲನಗೌಡ' ನೃತ್ಯ ರೂಪಕದಲ್ಲಿ ಗೌಡನಾಗಿ 'ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ನಾಟಕದಲ್ಲಿ ಪಂಡಿತನಾಗಿ, 'ಜ್ಞಾನೋದಯ'ದಲ್ಲಿ ಪ್ರಮುಖ ಪಾತ್ರ, 'ಜೀವನ್ಮುಖಿ'ಯಲ್ಲಿ ಅತ್ತೆ, 'ಕಿತ್ತೂರು ರಾಣಿ ಚೆನ್ನಮ್ಮ' ನಾಟಕದಲ್ಲಿ ನಟ, ಮಲ್ಲಸರ್ಜ, ಶಿವಬಸಪ್ಪ ಹೀಗೆ ಅನೇಕ ನಾಟಕಗಳಲ್ಲಿ ಸಮರ್ಪಕವಾಗಿ ಅಭಿನಯಿಸಿ, ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿ ಉತ್ತಮ ರಂಗ ಕಲಾವಿದೆಯಾಗಿದ್ದಾರೆ. ಚುಟುಕು, ಕಥೆ, ಕವನ, ಲೇಖನ, ಸಂಪಾದನೆ, ವಿಮರ್ಶೆ, ಪ್ರಬಂಧ ಇವುಗಳು, ಸಾಹಿತ್ಯ ಕ್ಷೇತ್ರಗಳಲ್ಲಿನ ಇವರ ಬರಹಗಳಾಗಿವೆ. ವ್ಯಕ್ತಿ ಪರಿಚಯ, ಪ್ರಕೃತಿ, ಪರಿಸರ ಇವುಗಳ ಬಗ್ಗೆಯೂ ಹತ್ತಾರು ವರ್ಷಗಳಿಂದ ಬರೆಯುತ್ತಾ ಮುಂಜಾವಿನ ಕವಿಯೆಂದೇ ಪ್ರಚಲಿತರಾಗಿದ್ದಾರೆ.

ಅನೇಕ ಶಾಲಾ- ಕಾಲೇಜು, ಸಂಘ - ಸಂಸ್ಥೆಗಳ ಸಂಪನ್ಮೂಲ ವ್ಯಕ್ತಿಯಾಗಿಯೂ ಸೇವೆ ಸಲ್ಲಿಸುತ್ತಿರುವ ಸತ್ಯಭಾಮ, ವನಿತಾ ಸಾಹಿತ್ಯ ವೇದಿಕೆಯ ಕಾರ್ಯದರ್ಶಿಯಾಗಿ, ರಂಗವೇದಿಕೆಯ ಉಪಾಧ್ಯಕ್ಷರಾಗಿ, ಚಿತ್ರದುರ್ಗ-ದಾವಣಗೆರೆ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟದ ಉಪಾಧ್ಯಕ್ಷರಾಗಿ, ಕಸ್ತೂರ ಬಾ ಸಮಾಜದ ಸಹ- ಕಾರ್ಯದರ್ಶಿ ಯಾಗಿ, ಜಾಗೃತ ಮಹಿಳಾ ಸಂಘ, ಕದಳಿ ಮಹಿಳಾ ವೇದಿಕೆ, ಶರಣ ಸಾಹಿತ್ಯ ಪರಿಷತ್ತು, ಚುಟುಕು ಸಾಹಿತ್ಯ ಪರಿಷತ್ತುಗಳಲ್ಲಿಯೂ ಪದಾಧಿಕಾರಿಯಾಗಿದ್ದೂ ಅಲ್ಲದೆ 'ಜಿಲ್ಲೆ ಸಮಾಚಾರ ಪತ್ರಿಕೆ ಬಳಗ'ದ ಅಧ್ಯಕ್ಷರಾಗಿ, ಜಿಲ್ಲಾ ಕ.ಸಾ.ಪ. ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕನ್ನಡ ಜಾಗೃತಿ ಸಮಿತಿ ಯ ಸದಸ್ಯರಾಗಿ, ಇನ್ನು ಹಲವಾರು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಅನುಪಮ ಸೇವಾ ಕಾರ್ಯಗಳನ್ನು ಗುರುತಿಸಿ, ಜೆ.ಸಿ.ಐ. ಮಾನವೀಯ ಸೇವೆಗೆ ಮೊದಲ ಸ್ಥಾನ, ಅಂಬೇಡ್ಕರ್ ಫೆಲೋಶಿಪ್, ಬಸವ ಜ್ಯೋತಿ ಪ್ರಶಸ್ತಿ, ದಾವಣಗೆರೆಯ ಮಹಾನಗರ ಪಾಲಿಕೆಯಿಂದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜಿಲ್ಲಾಡಳಿತದಿಂದ ರಾಜ್ಯೋತ್ಸವ ಪ್ರಶಸ್ತಿ ,ಜಿಲ್ಲಾ ವನಿತಾ ಸಾಹಿತ್ಯ ಶ್ರೀ ಪ್ರಶಸ್ತಿ, ಎಂ. ಕೆ. ಇಂದಿರಾ ಪ್ರಶಸ್ತಿ, ಸಿದ್ದಗಂಗಾ ಸೇವಾ ಪ್ರಶಸ್ತಿ, ಅಲ್ಲದೇ ಸಾಹಿತ್ಯ ಸಮ್ಮೇಳನ, ಸಾಹಿತ್ಯ ಗೋಷ್ಠಿಗಳಲ್ಲೂ ಅಭಿನಂದಿಸಿ, ಗೌರವಿಸಿದ್ದಾರೆ. ಇವರ ಆರು ಕವನ ಸಂಕಲನಗಳು ಬಿಡುಗಡೆಗೊಂಡಿವೆ. ನಾಟಕ ಪ್ರದರ್ಶನ ಎಲ್ಲೇ ನಡೆದರೂ ನೋಡುವ ಆಸಕ್ತಿ ಇವರದು.

ಸತ್ಯಭಾಮ ಇವರ ಪತಿ ಜಿ. ಆರ್. ಮಂಜುನಾಥ್ ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಹುದ್ದೆ ಯವರೆಗೂ ಸೇವೆ ಸಲ್ಲಿಸಿ ನಿವೃತ್ತರಾದವರು. ಈಗ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಗಂಡು ಮಕ್ಕಳಿಬ್ಬರು ಇಂಜಿನಿಯರಿಂಗ್ ಪದವೀಧರರು, ಹಿರಿಯ ಮಗ ಜಿ.ಎಂ. ರಾಘವೇಂದ್ರ ಪ್ರಸಾದ್ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್, ಕಿರಿಯ ಮಗ ಜಿ.ಎಂ. ರಾಖೇಶ್ ಭಾರತೀಯ ರಿಸರ್ವ್ ಬ್ಯಾಂಕ್ ನಲ್ಲಿ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ, ಇಬ್ಬರು ಸೊಸೆಯರಾದ ಸುಮಾ ಮತ್ತು ಸಿಂಧು ಇಂಜಿನಿಯರ್ ಪದವೀಧರರು, ಮೂರು ವರ್ಷದ ಮೊಮ್ಮಗ ಅನ್ವಯ್ ಇವ ರೊಂದಿಗೆ ಸಂತಸದ ಜೀವನ ಕಂಡಿದ್ದಾರೆ. ಸಂಕೀರ್ಣ ಕ್ಷೇತ್ರಗಳಲ್ಲಿ ಸಮಾಜಮುಖಿಯಾಗಿ ನಿರಂತರ ದುಡಿಯುತ್ತಾ ಬಂದಿರುವ ಸತ್ಯಭಾಮ ರವರಿಗೆ, 'ಸಿ .ಜಿ .ಕೆ. ಪ್ರಶಸ್ತಿ' ಒಲಿದು ಬಂದಿರುವುದು ಅವರ ಸೇವಾ ಕಾರ್ಯಕ್ಕೆ ಸಂದ ಗೌರವವಾಗಿದೆ.

- ಬಸವರಾಜ ಐರಣಿ,
ಪತ್ರಕರ್ತರು ದಾವಣಗೆರೆ.

## ರಾಷ್ಟ್ರೀಯ ಚುಚ್ಚುಮದ್ದು ಕಾರ್ಯಕ್ರಮ



**ದೇವರಬೆಳಕೆರೆ**

ಮಲೇಬೆನ್ನೂರು, ಅ. 8- ದೇವರಬೆಳಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಗುಳದಹಳ್ಳಿ ಉಪ ಕೇಂದ್ರದ ಮಲ್ಲನಾಯಕನಹಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಶನಿವಾರ ರಾಷ್ಟ್ರೀಯ ಚುಚ್ಚುಮದ್ದು ಕಾರ್ಯಕ್ರಮ ನಡೆಸಲಾಯಿತು.

ನಾಳೆ ದಿನಾಂಕ 9 ರಿಂದ 14 ರವರೆಗೆ ನಡೆಯುವ ಮಿಷನ್ ಇಂದ್ರ ಧನುಷ್ ಮೂರನೇ ಸುತ್ತಿನ ಕಾರ್ಯಕ್ರಮದ ಬಗ್ಗೆ ತಾ, ಹಿರಿಯ ಆರೋಗ್ಯ ಮೇಲ್ವಿಚಾರಕಿ ಸುಧಾ ಸುಲಕೆ ಮಾತನಾಡಿ, ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಪರಿಪೂರ್ಣ ಲಸಿಕೆ ಪಡೆಯುವಂತೆ ತಿಳಿಸಿದರು. ಅದರಲ್ಲೂ ಮುಖ್ಯವಾಗಿ ವಲಸೆ ಹೋದಂತಹ ಗರ್ಭಿಣಿ ಹಾಗೂ ಮಕ್ಕಳಿಗೆ ಸಂಪೂರ್ಣವಾಗಿ ಲಸಿಕೆ ಪಡೆಯುವಂತೆ ಆರೋಗ್ಯ ಶಿಕ್ಷಣ ನೀಡಲಾಗುವುದು ಎಂದು ತಿಳಿಸಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಮಾತನಾಡಿದರು. ಪ್ರಾಥಮಿಕ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಲಕ್ಷ್ಮಿದೇವಿ, ಆದರ್ಶ, ಸಹಾಯಕ ಆರೋಗ್ಯ ಅಧಿಕಾರಿ ಮಹಮದ್ ಇಮ್ರಾನ್, ಆಶಾ ಕಾರ್ಯಕರ್ತೆ ಭಾಗೀರಥಿ, ಅಂಗನವಾಡಿ ಕಾರ್ಯಕರ್ತೆ ಉಮಾವತಿ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಹಿರಿಯ ನಾಗರಿಕ ದಿನಾಚರಣೆಯಲ್ಲಿ ಚಿತ್ರಕಿ



ದಾವಣಗೆರೆ, ಅ. 8- ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ ವಿನೂತನ ಮಹಿಳಾ ಸಮಾಜದವರು ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಈಚೆಗೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಚಿತ್ರಕಿ ಶಿವಕುಮಾರ್ ಅವರು ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದರು. ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಮಂಜುನಾಥ್ ಉಪಸ್ಥಿತರಿದ್ದರು.

## ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ ಯೋಜನೆಗಳಿಗೆ ಅರ್ಜಿ

ದಾವಣಗೆರೆ, ಅ.8- ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿಗೆ ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸದು) (ನವೀಕರಣ), ಗಂಗಾ ಕಲ್ಯಾಣ ನೀರಾವರಿ ಯೋಜನೆ, ಸ್ವಯಂ ಉದ್ಯೋಗ, ನೇರ ಸಾಲ ಮತ್ತು ಸಹಾಯಧನ ಯೋಜನೆ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಆರ್ಥಿಕ ನೆರವು, ಸ್ವಯಂ ಉದ್ಯೋಗ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆಗೆ ಹಿಂದುಳಿದ ವರ್ಗಗಳ ಪ್ರವರ್ಗ-1 ರ ಅರ್ಜಿದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಾಲ ಸೌಲಭ್ಯ ಪಡೆಯಲು ನಿಗದಿತ ಅರ್ಜಿ ನಮೂನೆಗಳಲ್ಲಿ ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ನವೆಂಬರ್ 2 ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಚೇರಿ ಅಥವಾ ನಿಗಮದ ವೆಬ್‌ಸೈಟ್ https://ambigaradevelopment.karnataka.gov.in ನ್ನು ಸಂಪರ್ಕಿಸಬಹುದು.

ಅರ್ಜಿ ನಮೂನೆಯನ್ನು ನಿಗಮದ ವೆಬ್‌ಸೈಟ್‌ನಲ್ಲಿ ಹಾಗೂ ಉಚಿತವಾಗಿ ಜಿಲ್ಲಾ ಕಚೇರಿಯಲ್ಲಿ ಪಡೆಯಬಹುದು. ಜಿಲ್ಲಾ ನಿಗಮದ ಕಚೇರಿ ದೂರವಾಣಿ ಸಂಖ್ಯೆ 08192-230934 ಕ್ಕೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಸಾತ್ವಿಕ್ ತಿಳಿಸಿದ್ದಾರೆ.

## ಅಂದರ್-ಬಾಹರ್ ಇಸ್ಪೀಟ್ ಜೂಜಾಟ: 2 ಲಕ್ಷ ರೂ. ನಗದು ವಶ

ದಾವಣಗೆರೆ, ಅ. 8- ಚನ್ನಗಿರಿ ತಾಲ್ಲೂಕಿನ ಮಂಗೇನಹಳ್ಳಿ ಗ್ರಾಮದಿಂದ ಮೆದಿಕೆರೆ ಗ್ರಾಮದ ಕಡೆಗೆ ಹೋಗುವ ರಸ್ತೆ ಪಕ್ಕದ ಚಾನಲ್ ಏರಿಯಾ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಅಂದರ್-ಬಹರ್ ಇಸ್ಪೀಟ್ ಜೂಜಾಟ ನಡೆಯುತ್ತಿದ್ದ ಮಾಹಿತಿಯನ್ನು ಪಡೆದ ಪೊಲೀಸರು ದಾಳಿ ನಡೆಸಿ, 2,10,000 ರೂ. ನಗದು ವಶಪಡಿಸಿಕೊಂಡಿದ್ದಾರೆ.

ಎಸ್ಪಿ ಉಮಾ ಪ್ರಶಾಂತ್ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಪಿ. ಪ್ರಸಾದ್, ಸಿಬ್ಬಂದಿ ಪ್ರಕಾಶ್, ಸೋಮಶೇಖರಪ್ಪ, ಪ್ರಕಾಶ್ ರಾವ್, ಗೋವಿಂದರಾಜ್, ಮುತ್ತುರಾಜ್, ಅಂಜಿನಪ್ಪ, ಮಲ್ಲಿಕಾರ್ಜುನ್ ಹಾದಿಮನಿ, ಸಚಿನ್, ಮಂಜುನಾಥ್ ಮಟ್ಟೋಳಿ, ನಾಗರಾಜ್, ಲಿಂಗರಾಜ್ ಅವರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿ ದಾಳಿಗೆ ಸೂಚಿಸಿದ್ದರು. ಈ ತಂಡ ಜೂಜಾಟದ ಸ್ಥಳಕ್ಕೆ ಭೇಟಿ ನೀಡಿ ಅಕ್ರಮವಾಗಿ ಜೂಜಾಟದಲ್ಲಿ ಪಾಲ್ಗೊಂಡಿದ್ದ 13 ಜನರನ್ನು ಹಿಡಿದು ಅವರಿಂದ 2,10,000 ನಗದು ವಶಪಡಿಸಿಕೊಂಡಿದ್ದಾರೆ.

ದಾವಣಗೆರೆ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದಾಳಿಯಲ್ಲಿ ಭಾಗವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಗೆ ಎಸ್ಪಿ ಉಮಾ ಪ್ರಶಾಂತ್, ಹೆಚ್ಚುವರಿ ಎಸ್ಪಿ ಆರ್.ಬಿ. ಬಸರಗಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ಹರಿಹರ : ಹಿಂದೂ ಮಹಾಗಣಪತಿ ವಿಸರ್ಜನೆ



**ಹುಬ್ಬಳ್ಳಿ ಮತ್ತು ಹರಿಹರದ ಮೂರು ಡಿಜೆ ಸೌಂಡ್ ಸಿಸ್ಟಮ್ ತಾಳಕ್ಕೆ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್ ಹಾಗು ಹಲವು ಮುಖಂಡರು ಯುವಕರು, ಯುವತಿಯರು, ಮಕ್ಕಳ ನೃತ್ಯಗಳು ಮೆರವಣಿಗೆಗೆ ಮೆರಗು ನೀಡಿದವು. ಮೆರವಣಿಗೆಯಲ್ಲಿ ಅಂಬೇಡ್ಕರ್ ಫೋಟೋ, ಕೇಸರಿ ಧ್ವಜ ಮತ್ತು ದಲಿತ ಸಮುದಾಯದ ನೀಲಿ ಬಾವುಟವನ್ನು ಹಿಡಿದು ಯುವಕರು ಕುಣಿದು ಹರ್ಷ ವ್ಯಕ್ತಪಡಿಸಿದರು.**

**(1ನೇ ಪುಟದಿಂದ)** ಹಾಜರಿದ್ದರು

ಮೆರವಣಿಗೆಯಲ್ಲಿ ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ತಪೋವನ ಛೇರ್ಮನ್ ಶಶಿಕುಮಾರ್, ಹಿಂದೂ ಮಹಾಗಣಪತಿ ಸೇವಾ ಸಮಿತಿ ಅಧ್ಯಕ್ಷ ಎ.ಬಿ. ವಿಜಯಕುಮಾರ್, ಟ್ರಸ್ಟ್ ಅಧ್ಯಕ್ಷ ಬಸವನಗೌಡ, ಕಸಬಾ ಗೌಡ್ರು, ಲಿಂಗರಾಜ್ ಪಾಟೀಲ್, ವಿ.ಬಿ. ವಿನಯಕುಮಾರ್, ಗಿರೀಶ್ ಗೌಡ, ರಾಜು ರೋಖಡೆ, ಹಿಂಡಸಘಟ್ಟ ಲಿಂಗರಾಜ್, ಸ್ವಾತಿ ಹನುಮಂತಪ್ಪ, ಚಂದ್ರಕಾಂತ, ಸಂತೋಷ್ ಗುಡಿಮನಿ, ವೀರೇಶ್ ಅಜ್ಜಣ್ಣನವರ್, ಬಾತಿ ಚಂದ್ರಶೇಖರ್, ಮಹಾಂತೇಶಪ್ಪ ಕೆಂಚನಹಳ್ಳಿ, ಮೋಹನ್, ಕಂಚಿಕೇರಿ ಚಿದಾನಂದ, ಶಿವು, ಮಹೇಶ್, ಅದ್ವೈತ ಶಾಸ್ತ್ರಿ, ಚಂದನ್ ಮೂರ್ಕಲ್, ಅಜಿತ್ ಸಾವಂತ್, ಶಿವಪ್ರಕಾಶ್ ಶಾಸ್ತ್ರಿ, ತುಳಜಪ್ಪ ಭೂತೆ, ರವಿ ರಾಯ್ಕರ್, ರಾಚಪ್ಪ, ಮಂಜಾನಾಯ್ಕ್, ಕೀರ್ತಿಕುಮಾರ್, ಹೊವಳೆ ರಾಜು, ನಿರಂಜನ್ ದೀಟೂರು, ಉಮೇಶ್ ಗಂಗನಹರಸಿ, ಶಿವಶಂಕರ್ ಚಿಕ್ಕಬಿದರಿ, ವಿನಾಯಕ, ಡಿಶ್ ಅಣ್ಣಪ್ಪ, ರಡ್ಡಿ ಹನುಮಂತಪ್ಪ, ರಾಮಣ್ಣ, ಕುಮಾರ್ ಸ್ವಾಮಿ ಹಿರೇಮಠ, ಸಂಗನಾಳಮಠ, ಚಂದ್ರು ಸರಪದ್, ಆಂಜನಪ್ಪ, ಕಂಚಿಕೇರಿ ಮಹೇಶಪ್ಪ, ತಿಪ್ಪೇಶ್, ಕಿರಣ್ ಕಂಚಿಕೇರಿ, ರಾಘವೇಂದ್ರ, ಸೋಮಶೇಖರ್, ಲೋಕೇಶ್ ಮೂರ್ಕಲ್, ಆನಂದ್ ಮೂರ್ಕಲ್, ಶಿವಕುಮಾರ್, ಅಶ್ವಿನಿ ಕೃಷ್ಣ, ರುದ್ರಮ್ಮ, ಇಂದ್ರಾಣಿ, ಸಾಕ್ಷಿ, ಸಾವಿತ್ರ, ಡಿ.ವೈ. ಇಂದ್ರಮ್ಮ, ರೂಪಾ ಶಶಿಕಾಂತ್, ರೂಪಾ ಕಾಟ್ವೆ, ಪ್ರಮೀಳಾ ನಲ್ಲೂರು, ಅಂಬುಜಾ ರಾಜೊಳ್ಳಿ, ರಶ್ಮಿ ಮೆಹರ್ವಾಡೆ, ಸುಧಾ ಸೋಳಂಕಿ, ಪಾರ್ವತಿ, ಮಂಜುಳಾ, ನಾಗಮ್ಮ, ಮಾಲಾ, ಭಾಗ್ಯಮ್ಮ, ಸಿದ್ದಮ್ಮ, ಚಂದ್ರು ಹೊನ್ನಾಳಿ, ಕರಿಬಸಪ್ಪ ಕಂಚಿಕೇರಿ, ಸುನಿಲ್ ಪ್ರಶಾಂತ್ ಗೋಪಾಲ ದುರಗೋಜಿ, ಧರಣೇಂದ್ರ, ವಿನಯ್ , ಕಿರಣ್ ಭೂತೆ, ಗಿರೀಶ್ ಎನ್, ಮಲ್ಲಿಕಾರ್ಜುನ, ಅಭಿಷೇಕ, ರಟ್ಟಿಹಳ್ಳಿ ಮಂಜುನಾಥ್ ಇತರರು ಹಾಜರಿದ್ದರು.

## ಪಟಾಕಿ ದುರಂತ : ತನಿಖೆಗೆ ಆದೇಶ

**(1ನೇ ಪುಟದಿಂದ)** ಶಿವಕುಮಾರ್ ಮಾತ ನಾಡಿ, ಮೃತರ ಕುಟುಂಬಗಳಿಗೆ ಈಗಾಗಲೇ 5 ಲಕ್ಷ ರೂ. ಪರಿಹಾರ ಘೋಷಿಸಿದ್ದೇವೆ. ಗಾಯಗೊಂಡವರ ಆಸ್ಪತ್ರೆಯ ವೆಚ್ಚವನ್ನು ಭರಿಸಲಾಗುವುದು ಎಂದರು.

**ಬೊಮ್ಮಾಯಿ ಟೀಕೆ :** ಅತ್ತಿಬೆಲೆ ಪಟಾಕಿ ದುರಂತಕ್ಕೆ ಸ್ಥಳೀಯ ಜಿಲ್ಲಾಡಳಿತದ ನಿರ್ಲಕ್ಷ್ಯವೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಹಣಕ್ಕಾಗಿ ಅಕ್ರಮ ಲೈಸೆನ್ಸ್ ಕೊಡುವುದು, ಅಕ್ರಮವಾಗಿ ಶೇಖರಣೆಗೆ ಅವಕಾಶ ಮಾಡಿಕೊಟ್ಟಿರುವುದರಿಂದ ದೊಡ್ಡ ದುರಂತ ಆಗಿದೆ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡರೆ ಅನಾಹುತಗಳು ತಪ್ಪಲಿವೆ ಎಂದವರು ತಿಳಿಸಿದ್ದಾರೆ.

## ಮನಸ್ಸಿನ ನಿಯಂತ್ರಣಕ್ಕೆ ಯೋಗ ಸಹಕಾರಿ

**(1ನೇ ಪುಟದಿಂದ)** ಮೀಸಲಿಡಬೇಕು. ಹೆಚ್ಚಾಗಿ ಮಹಿಳೆಯರಿಗೆ ಭಾಗವಹಿಸುವ ಅವಕಾಶ ಕಲ್ಪಿಸಿರುವ ಆಯೋಜಕರನ್ನು ಅಭಿನಂದಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಎನ್‌ಎಸ್‌ಎಸ್ ಅನುಷ್ಠಾನಾಧಿಕಾರಿ ಡಾ. ಪೂರ್ಣಿಮ ಜೋಗಿ ಎಸ್, ರೈತ ಮಹಿಳೆ, ಸಮಾಜ ಸೇವಕಿ ಎಂ.ಜಿ. ಶಶಿಕಲಾ ಮೂರ್ತಿ ನಲ್ಕುದುರೆ, ಎಸ್‌ವೈಎಸ್‌ಎ ಅಧ್ಯಕ್ಷ ಡಾ. ಕೆ. ಜೈಮುನಿ, ಉಪಾಧ್ಯಕ್ಷ ಡಾ.ಎನ್. ಪರಶುರಾಮ್, ಹರಿಹರದ ಡಾ. ಡಿ. ಫ್ರಾನ್ಸಿಸ್ ಕ್ಸೇವಿಯರ್, ಶಾಂಭವಿ, ತೀರ್ಪುಗಾರರಾದ ಸುಷ್ಮಿತರಾಯ್ ಮುಂತಾದವರು ಉಪಸ್ಥಿತರಿದ್ದರು.

ಯೋಗ ವಿದ್ಯಾರ್ಥಿಗಳು ಯೋಗ ನೃತ್ಯ ಮಾಡಿದರು. ಯೋಗ ತೀರ್ಪುಗಾರರಾದ ಶೈಲಜಾ ಸ್ವಾಗತಿಸಿದರು. ಉಪನ್ಯಾಸಕಿ ನಳಿನಿ ನಿರೂಪಿಸಿದರು.

## ಸಂಪನ್ಮೂಲ ಕ್ರೋಢೀಕರಣಕ್ಕೆ 'ಮದ್ಯ ಭಾಗ್ಯ' ಜಿಲ್ಲಾ ಆಮ್ ಆದ್ಮಿ ಟೀಕೆ

ದಾವಣಗೆರೆ,ಅ.8- ರಾಜ್ಯ ಸರ್ಕಾರ ಉಚಿತ ಯೋಜನೆ ಘೋಷಿಸಿ ಈಗ 'ಇಂಗು ತಿಂದ ಮಂಗನ ಹಾಗೆ' ಇದನ್ನು ಸರಿದೂಗಿಸಲು ಸಂಪನ್ಮೂಲ ಕ್ರೋಢೀಕರಣಕ್ಕೆ 'ಮದ್ಯ ಭಾಗ್ಯ' ಯೋಜನೆ ಜಾರಿಗೆ ತರಲು ಹೊರಟಿದೆ ಎಂದು ಆಮ್ ಆದ್ಮಿ ಪಾರ್ಟಿ ಟೀಕಿಸಿದೆ. ಕಳೆದ 8 ವರ್ಷಗಳಿಂದ ದೆಹಲಿ ಆಪ್ ಸರ್ಕಾರ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಪ್ರಯಾಣ, ಆರೋಗ್ಯ ಸೇವೆ ಮತ್ತು ಶಿಕ್ಷಣಕ್ಕೆ ಒತ್ತುನೀಡಿದೆ. ಆದರೆ ಆರ್ಥಿಕವಾಗಿ ಸಬಲರಾಗಲು ಮದ್ಯಪಾನದಂತಹ ಕೆಟ್ಟ ನಿರ್ಧಾರ ತೆಗೆದುಕೊಂಡಿಲ್ಲ. ಅಲ್ಲದೇ ಈ ಹಿಂದೆ ಕಾಂಗ್ರೆಸ್ ಸರ್ಕಾರ ಮಾಡಿದ್ದ ಎಲ್ಲ ಸಾಲವನ್ನೂ ತೀರಿಸಿ ಈಗ ಸಾಲ ಮುಕ್ತ ರಾಜ್ಯವಾಗಿದೆ. ಆದ್ದರಿಂದ ರಾಜ್ಯ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮದ್ಯದಂಗಡಿಗಳನ್ನು ತೆರೆಯುವುದನ್ನು ಬಿಟ್ಟು, ಸರಿಯಾದ ಮಾರ್ಗಗಳಲ್ಲಿ ರಾಜ್ಯದ ಖಜಾನೆ ತುಂಬಿಸಿಕೊಳ್ಳಬೇಕು ಎಂದು ಪಕ್ಷದ ಜಿಲ್ಲಾ ಅಧ್ಯಕ್ಷ ಕೆ.ಎಸ್. ಶಿವಕುಮಾರಪ್ಪ ಮತ್ತು ರಾಜ್ಯ ಜಂಟಿ ಕಾರ್ಯದರ್ಶಿ ಕೆ.ಎಲ್.ರಾಘವೇಂದ್ರ, ಒತ್ತಾಯಿಸಿದ್ದಾರೆ.

## ರಾಣೇಬೆನ್ನೂರು : ಜಿಲ್ಲಾ ಮಟ್ಟದ ವರದಿಗಾರರ ತರಬೇತಿ ಕಾರ್ಯಾಗಾರ

ರಾಣೇಬೆನ್ನೂರು,ಅ. 8-ಹಿರೇಕೆರೂರು ಪಟ್ಟಣದ ಡಿ.ಆರ್. ತಂಬಾಕದ ಪ್ರಥಮ ದರ್ಜೆ ಕಾಲೇಜು ಸಭಾಭವನದಲ್ಲಿ ಇದೇ ದಿನಾಂಕ 10 ಮತ್ತು 11 ರಂದು ಎರಡು ದಿವಸಗಳ ಕಾಲ ಜಿಲ್ಲಾ ಮಟ್ಟದ ಉದಯೋನ್ಮುಖ ವರದಿಗಾರರ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ನಗರದ ಸಿಡ್ಲು ಪತ್ರಿಕೆ ಉಪಸಂಪಾದಕ ಎಸ್. ಜಿ. ಮಹಾನುಭಾವಿಮಠ ಹೇಳಿದರು.

ಹಿರೇಕೆರೂರು ಸಹಕಾರಿ ವಿದ್ಯಾವರ್ಧಕ ಸೌಹಾರ್ದ ಸಹಕಾರಿ ನಿಯಮಿತದ ಸಹಯೋಗದಲ್ಲಿ ಶಿಬಿರವು ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ: 9164702729, 9986344291, 998666953, 7892316079.

## ಪರಿಹಾರ ನೀಡಲು ದೇವೇಂದ್ರಪ್ಪ ಒತ್ತಾಯ

**(1ನೇ ಪುಟದಿಂದ)** ಉಪವಿಭಾಗಾಧಿಕಾರಿ ದುರ್ಗಾಶ್ರೀ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಉಪನಿರ್ದೇಶಕ ಶ್ರೀನಿವಾಸ್, ತೋಟಗಾರಿಕೆ ಇಲಾಖೆ ರವೀಂದ್ರ ನಾಯ್ಕ್, ತಹಶೀಲ್ದಾರ್ ಅರುಣ್ ಕಾರಗಿ, ಎ.ಡಿ. ತೋಟಯ್ಯ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮಿಥುನ್ ಕಿಮಾವತ್, ಸಿಪಿಐ ಶ್ರೀನಿವಾಸ್ ರಾವ್ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.


**ಪಿ.ಜೆ. ಮತ್ತು ಎಂ.ಸಿ.ಸಿ. 'ಎ' ಬ್ಲಾಕ್ ಸೈಟುಗಳು ಮಾರಾಟಕ್ಕಿವೆ**
ಪಿ.ಜೆ. ಬಡಾವಣೆ ಪಶ್ಚಿಮ 80x80, ಉತ್ತರ 50x75, ಎಂ.ಸಿ.ಸಿ. ಎ ಬ್ಲಾಕ್, ಪೂರ್ವ-ದಕ್ಷಿಣ ಕಾರ್ನರ್ 44x60, ಪೂರ್ವ 44x60
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40 East, 30x40 West, 30x40, 30x40 East ಅಕ್ಕ-ಪಕ್ಕ, Rate - 2500.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x40 ಪಶ್ಚಿಮ-ದಕ್ಷಿಣ ಕಾರ್ನರ್ 30x40 ಪಶ್ಚಿಮ, 30x40 ಪೂರ್ವ 30x50 ಪೂರ್ವ, 30x50 ಉತ್ತರ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್ ಮಾರಾಟಕ್ಕೆ(KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ (for immediately register only) ಕಮೀಷನ್ +ರಿಜಿಸ್ಟರ್ ಸೇರಿ 40x60 ದಕ್ಷಿಣ ಡಬಲ್ ರೋಡ್ ಪಕ್ಕ 40 ಅಡಿ ರಸ್ತೆಗೆ (64 ಲಕ್ಷ)
ಕಿರಣ್ ಭೂಸನೂರ್(ಏಜೆಂಟ್)
98440 63409

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ, ಸಿದ್ದವೀರಪ್ಪ ಹಾಗೂ ದಾವಣಗೆರೆ ಎಲ್ಲಾ ಬಡಾವಣೆಗಳ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ :
97315 12365

**ಮನೆಗಳು ಮಾರಾಟಕ್ಕಿವೆ**
ಪಿ.ಜೆ. ಬಡಾವಣೆ (ಚೇತನ ಹೋಟೆಲ್ ಹತ್ತಿರ) ಪಶ್ಚಿಮ 30x40 (3ನೇ ಫ್ಲೋರ್) ಕ್ಲಿನಿಕ್‌ಗೆ ಉಪಯುಕ್ತವಾದ ಜಾಗ) ಎಂ.ಸಿ.ಸಿ. ಬಿ ಬ್ಲಾಕ್ ಪೂರ್ವ 44x60 ಡುಪ್ಲೆಕ್ಸ್, ತರಳಬಾಳು ಬಡಾವಣೆ ದಕ್ಷಿಣ 30x60 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ್
99457 02495

**ಮನೆಗಳು ಮಾರಾಟಕ್ಕಿವೆ**
30x50 ಪಶ್ಚಿಮ ಎಸ್.ಎಸ್. ಲೇಔಟ್, 30x40 ಉತ್ತರ ಎಸ್. ಎಸ್. ಲೇಔಟ್ 30x60 ಪಶ್ಚಿಮ ತರಳಬಾಳು ಬಡಾವಣೆಯಲ್ಲಿ ಇದೆ.
ಏಜೆಂಟರು. ಎಸ್. ಯಲ್ಲೋಜಿರಾವ್
97418 11694

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಕೆಲಸಕ್ಕೆ ಬೇಕಾಗಿದ್ದಾರೆ**
ವೆಜ್ ಮತ್ತು ನಾನ್‌ವೆಜ್ ಅಡುಗೆಯಲ್ಲಿ ಅನುಭವವುಳ್ಳ ಹೆಂಗಸರು (4+2) = 6 ಜನಕ್ಕೆ ಅಡುಗೆ ಮಾಡಲು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ.
ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್
ಆರ್‌ಎಂಸಿ ಲಿಂಕ್ ರೋಡ್, ಬಂಬೂ ಬಜಾರ್, ದಾವಣಗೆರೆ.
77605 65777
99727 51777

**ಸೈಟ್ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆ (ಪೋದಾರ್ ಸ್ಕೂಲ್ ಹತ್ತಿರ) 20x30 ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
95918 29780

**ಮನೆ ಲೀಸ್‌ಗೆ ಇದೆ**
3 BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ ದಾವಣಗೆರೆ.
88616 89590

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಕೊಡಲಾಗುವುದು.
99863 61250, 80730 24690

**WANTED**
Excutives Male =100, Excutives Females =100, Office Staff Females =4 Members (Good communication skill and computer knowledge language knowns kannada, Hindi, English, Marathi ) Good Salary +Incentive. More Details Contact :
80505 10329
Watsapp 72597 82546
Send The Photo And Biodata

**ಸೈಟುಗಳು ಮಾರಾಟಕ್ಕಿವೆ**
ಹದಡಿ ಶೆಟ್ಟರ್ ಹೊಲ ಪೂರ್ವ ಮುಖವುಳ್ಳ 40x50 ಅಳತೆಯ ಸೈಟ್ ಮತ್ತು ಸರ್ಕಾರಿ ನೌಕರರ ಬಡಾವಣೆ (ಭರತ್ ಡಾಬಾ ಅಜಯಕುಮಾರ್)ಯಲ್ಲಿ 30x40 ಸೈಟ್‌ಗಳು ಮಾರಾಟಕ್ಕಿವೆ.
98440 26622

**REQUIRED**
Car Washing Boys for Service Station.
Contact :
91485 71102

**ವಿದ್ಯುತ್ ಸಮಸ್ಯೆಗೆ ಪರಿಹಾರ**
ನಮ್ಮಲ್ಲಿ ಎಲ್ಲಾ ತರಹದ
• UPS ಬ್ಯಾಟರಿ • RO ಫಿಲ್ಟರ್ • ಸೋಲಾರ್ ಸೇಲ್ಸ್ ಮತ್ತು ಸರ್ವೀಸ್ ಮಾಡಲಾಗುವುದು.
ಸಂಪರ್ಕಿಸಿ
ಫೀಸ್ ಎಂಟರ್ ಪ್ರೈಸಸ್
ಬಕ್ಕೇಶ್ವರ ಹೈಸ್ಕೂಲ್ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ.
83100 42490
99013 18277, 98801 56667

**ಪಾರ್ಟನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆಯ ಪಿ ಬಿ ರಸ್ತೆಯಲ್ಲಿರುವ ಜೈನ್ ಟೆಂಪಲ್ ಹಿಂಭಾಗದಲ್ಲಿ ಪಿಬಿ ರಸ್ತೆ ಹಾಗೂ NH-4 ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗುತ್ತಿರುವ ನಿವೇಶನಗಳನ್ನು ಸುಲಭ 3 ಕಂತುಗಳಲ್ಲಿ prebooking ಮಾಡಿಕೊಳ್ಳಲಾಗುತ್ತಿದೆ. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.
90192 33241, 90198 88512

**EXPERIENCED SALES GIRL REQUIRED**
for branded textile showroom.
98867 57688

**ಸೈಟುಗಳು ಮಾರಾಟಕ್ಕಿವೆ**
1) 45x48 South ವಿನಾಯಕ ಬಡಾವಣೆ 2) 29x50 North ಆಂಜನೇಯ ಬಡಾವಣೆ 3) 30x40 North ಬನಶ್ರೀ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆ, ಸೈಟುಗಳು ಮಾರಾಟಕ್ಕಿವೆ**
30x50 East ಮನೆ, 40x60 North, 120 ಅಡಿ ರೋಡಿಗಿದೆ, 40x60, 40x60 South ಅಕ್ಕ-ಪಕ್ಕ, 40x60 East.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹೋಟೆಲ್‌ಗೆ ಬಳಸುವ ವಸ್ತುಗಳ ಮಾರಾಟಕ್ಕೆ ಇವೆ.**
76763 11657

**ಬ್ಯೂಟಿ ಪಾರ್ಲರ್ ಐಟಮ್ಸ್‌ಗಳು ಮಾರಾಟಕ್ಕಿವೆ**
ಮಿರರ್, ಟೇಬಲ್, ಚೇರ್ ಮತ್ತು ಪಾರ್ಟಿಷನ್ ಮಾರಾಟಕ್ಕಿವೆ. ಆಸಕ್ತರು ತಕ್ಷಣ ಸಂಪರ್ಕಿಸಿ.
96207 97672, 81975 36187

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED TEACHERS**
Kids Campus International Pre School Davangere
Wanted : Teachers for Nursery. Fluency in English
99003 78196


**ಮಳಿಗೆ ಮಾರಾಟಕ್ಕಿದೆ**
ಕೆಎಸ್‌ಎಸ್‌ಐಡಿಸಿ ಇಂಡಸ್ಟ್ರೀಯಲ್ ಏರಿಯಾ ಸಾಗರ ರಸ್ತೆ, ಎಪಿಎಂಸಿ ಪಕ್ಕ, ಶಿವಮೊಗ್ಗದಲ್ಲಿ 50x40 ಅಡಿ ಅಳತೆಯಲ್ಲಿ 50 ಹೆಚ್‌ಪಿ ವಿದ್ಯುತ್ ಸಂಪರ್ಕವಿರುವ ಮಳಿಗೆ ಮಾರಾಟಕ್ಕಿದೆ.
861828 8005, 98444 93506

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6 Pm ಬರುವಾಗ ದಯವಿಟ್ಟು ಪೋಟೋ, ಬಯೋಡೇಟಾ ತನ್ನಿ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ.
97420 97140, 99861 62462

**ಕೆಲಸಕ್ಕೆ ಬೇಕಾಗಿದ್ದಾರೆ**
ಡಿಟಿಪಿ, ಫೋಟೋಶಾಪ್ ಮತ್ತು ವೀಡಿಯೋ ಎಡಿಟಿಂಗ್‌ನ ಅನುಭವವುಳ್ಳ ಯಾವುದೇ ವಿದ್ಯಾರ್ಹತೆ ಹೊಂದಿರುವ ಆಸಕ್ತ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್
ಆರ್‌ಎಂಸಿ ಲಿಂಕ್ ರೋಡ್, ಬಂಬೂ ಬಜಾರ್, ದಾವಣಗೆರೆ.
99727 51777, 99721 31777
82770 57777

**ಸೈಟು ಮಾರಾಟಕ್ಕಿದೆ**
(KHB) ಕರ್ನಾಟಕ ಗೃಹ ಮಂಡಳಿ 40 ಅಡಿ ರಸ್ತೆಗೆ ಬರುವಂತಹ 40x60 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
87622 85869, 76763 81314

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96201 50544

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
ಹರಿಹರ ಡೈಪರ್ ಸೆಂಟರ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಸೇಲ್ಸ್ ಬಾಯ್ಸ್, ಹರಿಹರ.
ವಿದ್ಯಾರ್ಹತೆ : 10th / 12th ಪಾಸ್ / ಫೇಲ್.
ಫೋ. : 7975077328

**ಹೋಮ್ ನರ್ಸಿಂಗ್ ಸರ್ವೀಸ್**
ಹೆಲ್ತ್‌ಕೇರ್ ಮಹಿಳೆಯರು ಅಂಡ್ ಪುರುಷರಿಗೆ ಸ್ನಾನ ಡೈಪರ್ ಚೇಂಜ್, ವಾಕ್ 1/2 ಗಂಟೆ, 1.5 ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ, ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಕೆಲಸಕ್ಕೆ ಸಿಗುತ್ತಾರೆ, ಬೇಕಾದವರು ಕರೆ ಮಾಡಿ, ವಯಸ್ಸಾದ ಜೆಂಟ್ಸ್, ಲೇಡಿಸ್ ಇವರಿಗೆ ಬೇಕಾದರೆ ಕರೆ ಮಾಡಿ ಕೆಲಸಕ್ಕೆ ಬೇಕಾದರೆ. ವಯೋವೃದ್ಧರನ್ನು ನೋಡಿಕೊಳ್ಳಲು ಕೇರ್ ಟೇಕರ್ ಬೇಕಾಗಿದ್ದಾರೆ. 24 ಗಂಟೆ ಡ್ಯೂಟಿಗೆ ಬೇಕಾಗಿದ್ದಾರೆ. ಡೇ ಅಂಡ್ ನೈಟ್ ಇರುತ್ತದೆ. ಸಂಪರ್ಕಿಸಿ :
91644 93271 ಶಿಲ್ಪ

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಕೆ.ಬಿ. ಬಡಾವಣೆ ಆಂಜನೇಯ ಬಡಾವಣೆ.
78997 60749, 99726 75759

**ಬೇಕಾಗಿದ್ದಾರೆ**
ಯಾವುದೇ ಪದವಿಯೊಂದಿಗೆ ಇಂಗ್ಲಿಷ್ ಭಾಷೆಯಲ್ಲಿ ಮತ್ತು ಕಂಪ್ಯೂಟರ್ ಅನುಭವವುಳ್ಳ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ.
99644 14199, 99806 62860

**IIT FOUNDATION MATHS**
From 5th, 6th, 7th Classes
Bruit Academy
Nijalingappa Badavane
M : 97390 66956

# ಪ್ರಥಮ ಅಂತರ್‌ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ



ಸಾಣೇಹಳ್ಳಿ, ಅ. 8- ಬರುವ ಡಿಸೆಂಬರ್ 30 ಮತ್ತು 31 ರಂದು ನಡೆಯಲಿರುವ ಪ್ರಥಮ ಅಂತರ್ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರನ್ನು ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನವರು ಅಧಿಕೃತವಾಗಿ ಸ್ವಾಗತಿಸಿ, ಗುರುವಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಂಡಿತಾರಾಧ್ಯ ಶ್ರೀಗಳು, ಯಾವುದೇ ಕೆಲಸ, ಕಾರ್ಯಗಳನ್ನು ಮಾಡಿದರೂ ನಕಾರಾತ್ಮಕ ಮತ್ತು ಸಕಾರಾತ್ಮಕ ಭಾವನೆ ಬರುವುದು ಸಹಜ. ಅದಕ್ಕೆ ತಲೆಕೆಡಿಸಿಕೊಳ್ಳುವ ಅವಶ್ಯಕತೆಯಿಲ್ಲ. ಬೈದವರೆನ್ನ ಬಂಧುಗಳೆನ್ನಬೇಕು. ಯಾರ ಟೀಕೆಗೂ ಗಮನ ಕೊಡದೆ ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಮುಂದುವರೆಸಬೇಕು ಎಂದು ಹಿತ ನುಡಿದರು.

ನಮ್ಮನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ನಮಗೆ ಆತಂಕವನ್ನುಂಟು ಮಾಡಿದೆ. ಯಾವುದೇ ಸಮಾರಂಭದಲ್ಲಿ ಕಾಲದ ಪ್ರಜ್ಞೆ ತುಂಬ ಮುಖ್ಯ. ಕಾಲಪ್ರಜ್ಞೆಯನ್ನರಿತು ಕಾರ್ಯಕ್ರಮ ಆಯೋಜನೆ ಮಾಡಬೇಕು. ಆಗ ಕಾರ್ಯಕ್ರಮ ಯಶಸ್ವಿಯಾಗುವುದರಲ್ಲಿ ಅನುಮಾನವೇ ಇಲ್ಲ ಎಂದು ತಿಳಿಸಿದರು.

ನಾವು ಯಾವಾಗಲೂ ಸಮಯ ಪ್ರಜ್ಞೆಗೆ ಹೆಚ್ಚು ಮಹತ್ವ ಕೊಟ್ಟವರು. ನಮ್ಮ ಹಿರಿಯ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರೂ ಸಮಯ ಪ್ರಜ್ಞೆಯನ್ನಿಟ್ಟುಕೊಂಡು ಸಮಾಜ ಕಟ್ಟಿದಂಥವರು. ಸಮಯದ ಬಗ್ಗೆ ಅರಿವಿಲ್ಲದ ಮನುಷ್ಯ ಬಾಲವಿಲ್ಲದ ಕೋತಿಯಂತೆ ಎಂದು ಮಾರ್ಮಿಕವಾಗಿ ನುಡಿಯುತ್ತಿದ್ದರು. ಅವರ ಹಾದಿಯಲ್ಲೇ ನಾವೂ ನಡೆಯುವಂಥವರು ಎಂದು ಹೇಳಿದರು.

ಆದರ್ಶಗಳು ಇನ್ನೊಬ್ಬರಿಗೆ ಆಗದೇ, ನಮ್ಮ ಆದರ್ಶಗಳು ನಮಗೇ ದಾರಿದೀಪವಾಗಬೇಕು. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಡಾಕ್ಟರೇಟ್ ಪದವಿ ವಿಚಾರ ಬಂದಾಗ 'ಸ್ವಾಮಿತ್ವ' ಎನ್ನುವುದಕ್ಕಿಂತ ಹೆಚ್ಚಿನ ಪದವಿ ಈ ಸಮಾಜದಲ್ಲಿ ಬೇಕೆ? ಎಂದು ಪ್ರಶ್ನೆ ಮಾಡಿದವರು. ಆ ಪರಂಪರೆಯಲ್ಲೇ ಬಂದಿರುವುದು ನಾವು ಎಂದರು.

ಇದೇ ವೇಳೆ ಚಿಕ್ಕಮಗಳೂರು ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಅಜ್ಜಂಪುರ ಸೂರಿ ಶ್ರೀನಿವಾಸ, ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶಿವಸ್ವಾಮಿ, ಸಂಶೋಧಕ ರಾಜಶೇಖರಪ್ಪ, ಚಿತ್ರದುರ್ಗ ಬಾಪೂಜಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕೆ.ಎಂ. ವೀರೇಶ್, ಎ.ಸಿ. ಚಂದ್ರಪ್ಪ, ಬಿ.ಪಿ. ಓಂಕಾರಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ವ್ಯಕ್ತಿ ಸ್ವಾತಂತ್ರ್ಯ ಕಸಿಯುವ ಪ್ರಯತ್ನ ಸಲ್ಲದು



ದಾವಣಗೆರೆ, ಅ. 8- ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಂವಿಧಾನದ ಮೂಲಕ ಬಂದಿರುವ ಒಬ್ಬರ ಸ್ವಾತಂತ್ರ್ಯವನ್ನು ಮತ್ತೊಬ್ಬರು ಕಸಿಯುವ ಪ್ರಯತ್ನವನ್ನು ಯಾರೂ ಸಹ ಮಾಡಬಾರದು ಎಂದು ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಹೇಳಿದರು.

ನಗರದ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ವಾಲ್ಮೀಕಿ ನಾಯಕ (ಎಸ್‌ಟಿ) ಸಮುದಾಯದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಪ್ರಬಲ ಆಕಾಂಕ್ಷಿಯಾಗಿ ಮುಂದೆ ಬಂದಿದ್ದೇನೆ. ಕಳೆದ ಮೂರು ತಿಂಗಳುಗಳಿಂದ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹಳ್ಳಿಗಳಿಗೆ ಭೇಟಿ ನೀಡಿರುವ ಕಾರಣ ನನ್ನ ಹೆಸರು ಪ್ರಚಲಿತದಲ್ಲಿದೆ. ರಾಜಕೀಯ ಸಮೀಕ್ಷೆಯಲ್ಲೂ ಸಹ ನನ್ನ ಹೆಸರು ಮುಂಚೂಣಿಯಲ್ಲಿ ಕೇಳಿಬರುತ್ತಿದ್ದು, ನನಗೇ ಟಿಕೆಟ್ ಸಿಗುತ್ತದೆಂಬ ಖಾತ್ರಿ ನನ್ನದು. ಯಾರಿಗೂ ಹೆದರದೇ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಅದು ನನ್ನ ವೈಯಕ್ತಿಕ ವಿಚಾರ ಎಂದು ವಿನಯ್ ಕುಮಾರ್ ಸ್ಪಷ್ಟಪಡಿಸಿದರು.

ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ದೇಶವಾಗಿದೆ. ರಾಜಕೀಯ ಕ್ಷೇತ್ರಕ್ಕೆ ಪಾದರ್ಪಣೆ ಮಾಡುವ ಮೂಲಕ, ಪ್ರತಿ ಹಳ್ಳಿಗಳಿಗೆ ಹೋದಾಗ ನನ್ನನ್ನು ಯಾರೂ ತಡೆಯುವುದಿಲ್ಲ. ಜನರನ್ನು ಮಾತನಾಡಿಸಿದಾಗ ಯಾರು ಕೂಡ ಬರಬೇಡ ಎಂಬ ನಿರ್ಬಂಧ ಕೂಡ ಹೇರಿಲ್ಲ ಎಂದರು.

ಇಂತಹ ಸ್ವಾತಂತ್ರ್ಯ ನಮಗೆಲ್ಲರಿಗೂ ನೀಡಿರುವ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ನನ್ನದೊಂದು ದೊಡ್ಡ ಸಲಾಂ. ಆದರೆ ಇಂತಹ ಸ್ವಾತಂತ್ರ್ಯವನ್ನು ಯಾರಿಂದಲೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಕಿತ್ತುಕೊಳ್ಳಲೂಬಾರದು. ಅಂತಹ ಪ್ರಯತ್ನ ಸಹ ಮಾಡಬಾರದು ಎಂದು ಹೇಳಿದರು.

> ಎಸ್ಟಿ ಸಮುದಾಯದ ಹತ್ತು ವಿದ್ಯಾರ್ಥಿಗಳಿಗೆ ಇನ್‌ಸೈಟ್ಸ್ ಸಂಸ್ಥೆಯಿಂದ ಉಚಿತವಾಗಿ ಐಎಎಸ್ ತರಬೇತಿ ನೀಡಲಾಗುವುದು. ಆಸಕ್ತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.
>
> - ಜಿ.ಬಿ. ವಿನಯ್ ಕುಮಾರ್

ಪ್ರಗತಿ ಹೊಂದಿದವರು ತುಳಿತಕ್ಕೆ ಒಳಗಾದವರನ್ನು ಮೇಲೆಕ್ಕೇರಲು ಬಿಡುತ್ತಿಲ್ಲ. ಹಣವುಳ್ಳವರೇ ಅಧಿಕಾರಕ್ಕೆ ಬರುತ್ತಿದ್ದು, ಈ ಎರಡೂ ಪರಿಸ್ಥಿತಿಗಳು ಬದಲಾಗಬೇಕು. ಅಸಮಾನತೆ ಹೋಗಲಾಡಿಸುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಕೆಲಸ ಮಾಡುತ್ತಿದೆ.

ಒಬ್ಬ ಯುವ ರಾಜಕಾರಣಕ್ಕೆ ಬರುತ್ತಾನೆಂದರೆ ಆತನಿಗೆ ಪ್ರೋತ್ಸಾಹ ಸಿಗುವುದಿಲ್ಲ. ಅವನು ಎಲ್ಲಿ ಬೆಳೆಯುತ್ತಾನೋ ಎನ್ನುವ ಭಯ. ಅಭದ್ರತೆ ಕಾಡುತ್ತಿದೆ. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ. ದೇಶಾದ್ಯಂತ ಇದೆ. ಇಂದು ಮಹತ್ತರ ಕನಸು ಕಾಣುವುದು ಕೂಡ ಅಪರಾಧವಾಗಿದೆ. ದೊಡ್ಡ ದೊಡ್ಡ ಕನಸು ಕಾಣಲು ನಮ್ಮ ಸಂಸ್ಥೆ ನಿಮ್ಮ ಜೊತೆ ಸದಾ ಇರುತ್ತದೆ ಎಂದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹುರಿದುಂಬಿಸಿದರು.

ಸಮಾರಂಭವನ್ನು ಉದ್ಘಾಟಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕರಿಸಿದ್ಧಪ್ಪ ಮಾತನಾಡಿ, ಸರ್ಕಾರಿ ಉದ್ಯೋಗ ಪಡೆಯುವಲ್ಲಿ ಪರಿಶಿಷ್ಟ ಸಮುದಾಯ ಹಿಂದೆ ಬಿದ್ದಿದ್ದು, ಈ ನಿಟ್ಟಿನಲ್ಲಿ ವಿದ್ಯಾವಂತ ಯುವಕ-ಯುವತಿಯರು ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯವಿದೆ ಎಂದರು.

ಮಕ್ಕಳ ಸಾಧನೆಗೆ ಪೋಷಕರು ಬೆನ್ನೆಲುಬಾಗಿ ನಿಲ್ಲಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ಕಲ್ಪಿಸಿಕೊಟ್ಟಾಗ ಮಾತ್ರ ದೇಶ ಅಭಿವೃದ್ಧಿ ಕಾಣಲು ಸಾಧ್ಯ. ರಾಜ್ಯದಲ್ಲಿ 83 ಲಕ್ಷ ಎಸ್ಟಿ ಜನಸಂಖ್ಯೆ ಇದ್ದು, ಸಮುದಾಯದ ಯುವಕ-ಯುವತಿಯರು ಉನ್ನತ ಸ್ಥಾನಮಾನ ಪಡೆಯಲು ವಾಲ್ಮೀಕಿ ಗುರುಪೀಠ ಮೆಡಿಕಲ್, ಇಂಜನಿಯರಿಂಗ್, ವೃತ್ತಿಪರ ಕಾಲೇಜುಗಳನ್ನು ಪ್ರಾರಂಭ ಮಾಡುವ ಅವಶ್ಯವಿದೆ ಎಂದರು.

ಎಸ್ಟಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಶ್ರೀನಿವಾಸಮೂರ್ತಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹಾಲೇಶಪ್ಪ, ಸಮಾಜದ ಮುಖಂಡ ಹೊದಿಗೆರೆ ರಮೇಶ್, ಪ್ರಗತಿ ಪರ ರೈತ ನಾಗೇಂದ್ರಪ್ಪ, ನಿವೃತ್ತ ಶಿಕ್ಷಕಿ ನಾಗವೇಣಿ, ನಿವೃತ್ತ ಪೊಲೀಸ್ ಅಧಿಕಾರಿ ಪ್ರಹ್ಲಾದ್, ಗುಮ್ಮನೂರು ಚನ್ನಬಸಪ್ಪ ಮತ್ತಿತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಸಿ.ಜಿ.ಕೆ ಪ್ರಶಸ್ತಿ ಪ್ರದಾನ

ಸಿ.ಜಿ.ಕೆ ಪ್ರಶಸ್ತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಇಂದು ಮಧ್ಯಾಹ್ನ 3 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯುವುದು. ಕರ್ನಾಟಕ ರಂಗ ಪರಿಷತ್ (ಬೆಂಗಳೂರು), ಶ್ರೀ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ವೇದಿಕೆ (ದಾವಣಗೆರೆ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ದಾವಣಗೆರೆ) ಇವರುಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾನ್ನಿಧ್ಯವನ್ನು ಪಾಂಡೋಮಟ್ಟಿ ಕಮ್ಮತ್ತಹಳ್ಳಿ ವಿರಕ್ತಮಠದ ಶ್ರೀ ಡಾ. ಗುರುಬಸವ ಮಹಾಸ್ವಾಮೀಜಿ ವಹಿಸುವರು. ಇನ್‌ಸೈಟ್ ಐಎಎಸ್ ಸಂಸ್ಥಾಪಕ ವಿನಯ್‌ಕುಮಾರ್ ಜಿ.ಬಿ. ಕಾರ್ಯಕ್ರಮ ಉದ್ಘಾಟಿಸುವರು. ಲಯನ್ಸ್ ಕ್ಲಬ್ ಅಧ್ಯಕ್ಷ ಸಿ.ಹೆಚ್. ದೇವರಾಜು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರವಿಚಂದ್ರ, ಬಿ. ವಾಮದೇವಪ್ಪ, ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಹೆಚ್.ಕೆ. ಲಿಂಗರಾಜು, ಹೆಚ್.ಎಸ್. ಮಲ್ಲಿಕಾರ್ಜುನಪ್ಪ ಆಗಮಿಸುವರು.

ಕಾರ್ಯಕ್ರಮದಲ್ಲಿ ಶ್ರೀಮತಿ ಹೆಚ್.ಕೆ. ಸತ್ಯಭಾಮ ಮಂಜುನಾಥ್ ಅವರಿಗೆ ಸಿ.ಜಿ.ಕೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಹೆಚ್.ಎನ್. ಶಿವಕುಮಾರ್ ಅವರ 'ತಂತು ನಾನೇನ' ಕಾದಂಬರಿ ಲೋಕಾರ್ಪಣೆ ನಡೆಯುವುದು.

## ಕೃಷಿ ಸಿಂಚಾಯಿ ಯೋಜನೆಗೆ ರೈತರಿಂದ ಅರ್ಜಿ ಆಹ್ವಾನ

ದಾವಣಗೆರೆ, ಅ.8- ತೋಟಗಾರಿಕೆ ಇಲಾಖೆ ವತಿಯಿಂದ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಗೆ ದಾವಣಗೆರೆ ಜಿಲ್ಲೆಯ ರೈತರುಗಳಿಂದ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ರೈತರು ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಪಂ), ಕಚೇರಿ, ಸಹಾಯಕ ತೋಟಗಾರಿಕೆ ಅಧಿಕಾರಿಗಳು, ರೈತ ಸಂಪರ್ಕ ಕಛೇರಿಗಳಿಗೆ ಇದೇ ದಿನಾಂಕ 31 ರೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಹೋಬಳಿಯ ಸಂಪರ್ಕ ಕೇಂದ್ರಗಳ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ದಾವಣಗೆರೆ, ಚನ್ನಗಿರಿ, ಹೊನ್ನಾಳಿ, ಹರಿಹರ ಮತ್ತು ಜಗಳೂರು ಇವರನ್ನು ಸಂಪರ್ಕಿಸಲು ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ.

## ಸ್ಕೌಟ್ಸ್ ಭವನದಲ್ಲಿ ಗಾಂಧೀಜಿ-ಶಾಸ್ತ್ರೀಜಿ ಜಯಂತಿ



ದಾವಣಗೆರೆ, ಅ. 8- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ವತಿಯಿಂದ ಡಿ.ಆರ್.ಎಂ.ಸ್ಕೌಟ್ ಭವನದಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಹುಟ್ಟುಹಬ್ಬದ ಪ್ರಯುಕ್ತ ಸರ್ವಧರ್ಮ ಪ್ರಾರ್ಥನೆ ನಡೆಸಲಾಯಿತು.

ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ ಜೆ. ಚಿಗಟೇರಿ ಕಾರ್ಯಕ್ರಮ ಉದ್ಘಾಟಿಸಿ, ಸರ್ವಧರ್ಮ ಪ್ರಾರ್ಥನೆಯ ಮಹತ್ವ ತಿಳಿಸಿದರು. ಗಾಂಧೀಜಿಯವರು ತಮ್ಮ ಜೀವನ ಚರಿತ್ರೆಯಲ್ಲಿ ಚಿಕ್ಕವರಿದ್ದಾಗ ತಾವು ಮಾಡಿದ್ದ ತಪ್ಪನ್ನೂ ಸಹ ಬರೆದಿದ್ದಾರೆ. ಸತ್ಯ, ಅಹಿಂಸೆಯ ಮಾರ್ಗದಲ್ಲಿ ನಡೆದವರು. ಲಾಲ್ ಬಹದ್ದೂರ್ ಶಾಸ್ತ್ರೀಜಿ ತುಂಬಾ ಸರಳವಾದ ವ್ಯಕ್ತಿ ಎಂದು ತಿಳಿಸಿದರು.

ಜಿಲ್ಲಾ ಸ್ಕೌಟ್ಸ್ ಆಯುಕ್ತ ಎ.ಪಿ. ಷಡಕ್ಷರಪ್ಪ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ದೇಶ ಭಕ್ತಿ ಕುರಿತು ಮಾತನಾಡಿದರು.

ಜಿಲ್ಲಾ ಗೈಡ್ ಆಯುಕ್ತರಾದ ಶಾರದ ಮಾಗಾನಹಳ್ಳಿ ಅವರು ಮಾತನಾಡಿ, ಪ್ರತಿಯೊಬ್ಬರೂ ಸಹ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜೀವನ ಚರಿತ್ರೆ ತಿಳಿಯಬೇಕೆಂದು ಹೇಳಿದರು.

ಉಪಾಧ್ಯಕ್ಷರಾದ ಶಾಂತ ಯಾವಗಲ್ ಹಾಗೂ ಸಹಾಯಕ ಜಿಲ್ಲಾ ಆಯುಕ್ತ ಎನ್.ಕೆ. ಕೊಟ್ರೇಶ್, ಕಾಂತಿಲಾಲ್, ಜಿಲ್ಲಾ ಜಂಟಿ ಕಾರ್ಯದರ್ಶಿ ಸುಖವಾಣಿ ಮತ್ತು ಯುವ ಸಮಿತಿ ಸದಸ್ಯರು, ಪೋಷಕರು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಎಂ. ರತ್ನ ಕಾರ್ಯಕ್ರಮ ನಿರೂಪಿಸಿದರು. ಎಸ್.ಜಿ.ವಿ. ಅಶ್ವಿನಿ ಸ್ವಾಗತಿಸಿ, ವಂದಿಸಿದರು.

## ಜೈನ್ ಲೇಔಟ್‌ನಲ್ಲಿ ಶಾಸ್ತ್ರೀಜಿ ಜಯಂತಿ



ದಾವಣಗೆರೆ, ಅ.8- ನಗರದ ಜೈನ್ ಲೇ ಔಟ್ ನಲ್ಲಿ ಶ್ರೀಮತಿ ಶಶಿಕಲಾ ಬಡದಾಳ್ ಅವರ ಅಧ್ಯಕ್ಷತೆಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕುಸುಮ, ಎಂ. ಜ್ಯೋತಿ, ಮಂಜುಳಾ, ಪ್ರೇಮ, ಅನುಪಮ, ಅಕ್ಷತಾ, ಕೆ. ಜ್ಯೋತಿ, ಸರಸ್ವತಿ, ಐಶ್ವರ್ಯ ಉಪಸ್ಥಿತರಿದ್ದರು.

## ಗೌಡ ಸಾರಸ್ವತ ಸಮಾಜದ ಅಧ್ಯಕ್ಷರಾಗಿ ಅಮಿತಾ ಪೈ ಪುನರಾಯ್ಕೆ



ದಾವಣಗೆರೆ, ಅ. 8- ಗೌಡ ಸಾರಸ್ವತ ಸಮಾಜದ ಅಧ್ಯಕ್ಷರಾಗಿ ಶ್ರೀಮತಿ ಅಮಿತಾ ಡಾ. ವೇಣುಗೋಪಾಲ್ ಪೈ ಅವರು ಅವಿರೋಧವಾಗಿ ಪುನರಾಯ್ಕೆಯಾ ಗಿದ್ದಾರೆ ಎಂದು ಸಮಾಜದ ಮಾಜಿ ಅಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಶ್ರೀ ಸುಕೃತೀಂದ್ರ ಕಲಾ ಮಂದಿರದಲ್ಲಿ ಇತ್ತೀಚಿಗೆ ನಡೆದ ಸರ್ವ ಸದಸ್ಯರ ಮಹಾಸಭೆಯಲ್ಲಿ ಶ್ರೀಮತಿ ಸರೋಜಾ ಶಾನಭಾಗ ಪ್ರಾರ್ಥಿಸಿದರು. ಕೀರ್ತಿ ಕಿಣಿ ಸ್ವಾಗತಿಸಿದರು. ವಾರ್ಷಿಕ ವರದಿ ವಾಚನ ಕೆ. ವೆಂಕಟರಮಣ ಭಟ್ ನಡೆಸಿಕೊಟ್ಟರು. ಆರ್.ವಿ.ಶೆಣೈ ಲೆಕ್ಕಪತ್ರ ಮಂಡಿಸಿ ಅನುಮೋದನೆ ಪಡೆದರು. ಗಣೇಶ್ ತಿಳ್ವೆ ಕಾರ್ಯಕ್ರಮ ನಿರೂಪಿಸಿದರು. ಕಿರಣ್‌ಕುಮಾರ್ ವಿ.ಶೆಣೈ ವಂದಿಸಿದರು. 2022-23ನೇ ಸಾಲಿನ 3 ವರ್ಷಗಳ ಅವಧಿಯ ಪದಾಧಿಕಾರಿಗಳಾಗಿ ಉಪಾಧ್ಯಕ್ಷರಾಗಿ ಕೆ. ನಿತ್ಯಾನಂದ ಕಾಮತ್, ಕಾರ್ಯದರ್ಶಿಯಗಿ ಕೆ. ವೆಂಕಟ ರಮಣಭಟ್, ಖಜಾಂಚಿಯಾಗಿ ಆರ್.ವಿ.ಶೆಣೈ, ಸಹ ಕಾರ್ಯದರ್ಶಿಯಾಗಿ ಕಿರಣ್‌ಕುಮಾರ್ ವಿ.ಶೆಣೈ ಸಮಿತಿ ಸದಸ್ಯರಾಗಿ ರಾಘವೇಂದ್ರ ಕಾಮತ್, ಎಂ.ನರಸಿಂಹ ಕಾಮತ್, ಕೀರ್ತಿ ಕಿಣಿ, ಶ್ರೀಮತಿಯವರಾದ ಉಷಾ ವಾಲಾವಲ್ಕರ್, ರೇಖಾ ಡಿ.ಪ್ರಭು, ಗಣೇಶ್ ಜಿ.ತಿಳ್ವೆ ಅವಿರೋಧವಾಗಿ ಆಯ್ಕೆಯಾದರು.

ಸಮಾಜದ ಮಾಜಿ ಅಧ್ಯಕ್ಷರುಗಳಾದ ಎನ್.ರವಿಚಂದ್ರ ನಾಯಕ್, ಕಿರಣ್ ವಾಲಾವಲ್ಕರ್, ದೇವದಾಸ ಪೈ, ಸಿ.ಪಿ.ಕಾಮತ್ ಮುಂತಾದವರು ಉಪಸ್ಥಿತರಿದ್ದರು.

# ಓದಿನ ಜೊತೆ ನಾಯಕತ್ವ ಗುಣ ಮೈಗೂಡಿಸಿಕೊಳ್ಳಬೇಕು

ದಾವಣಗೆರೆ, ಅ.8- ವಿದ್ಯಾರ್ಥಿ -ವಿದ್ಯಾರ್ಥಿನಿಯರು ಓದಿನ ಜೊತೆಗೆ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ಉನ್ನತ ಸಾಧನೆ ಮೆರೆಯಬೇಕು ಎಂದು ಸಂತ ಪೌಲರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕೆ.ಟಿ. ಮೇಘನಾಥ್ ಕರೆ ನೀಡಿದರು.

ನಗರದ ಸಂತ ಪೌಲರ ಪದವಿ ಪೂರ್ವ ಕಾಲೇಜಿನಲ್ಲಿ ಹಿಮಾಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ಹಮ್ಮಿಕೊಂಡಿದ್ದ ಸಾಹಸ ಕ್ರೀಡೆಗಳ ಕುರಿತ ತರಬೇತಿ ಕಾರ್ಯಾಗಾರ ಹಾಗೂ ಬೋಧಕರಿಗೆ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿನಿಯರಲ್ಲಿ ಸಾಹಸ ಗುಣ ಬೆಳೆಸಲು ಇಂತಹ ಕಾರ್ಯಾಗಾರ ಆಯೋಜಿಸಲಾಗಿದೆ ಎಂದರು.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲೂ ವಿದ್ಯಾರ್ಥಿಗಳು ಸಾಧನೆ ಮಾಡಬೇಕು. ಕಲೆ, ಕ್ರೀಡೆ, ಸಂಗೀತ, ಸಾಹಿತ್ಯ ಹೀಗೆ ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಗಮನಹರಿಸಬೇಕು. ತಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಗೆ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ನಿಮ್ಮ ಪಾಲಕರಿಗೂ ಸಹ ಮೊಬೈಲ್ ಕೊಡಿಸದಂತೆ ತಿಳಿ ಹೇಳುವ ಮೂಲಕ ನಿಮ್ಮ ಜ್ಞಾನ ಸಾಧನೆಗೆ ಹೆಚ್ಚು ಒತ್ತು ನೀಡಲಾಗಿದೆ ಎಂದು ಅವರು ತಿಳಿಸಿದರು.

ಬೋಧಕರನ್ನು ಸನ್ಮಾನಿಸಿ ಮಾತನಾಡಿದ ಹಿರಿಯ ಪತ್ರಕರ್ತ ನಾಗರಾಜ ಎಸ್.ಬಡದಾಳ್, ಸಾಹಸ ಕ್ರೀಡೆಗಳ ಬಗ್ಗೆ ಗಂಟೆಗಟ್ಟಲೇ ಕಾರ್ಯಾಗಾರದಲ್ಲಿ ಆಲಿಸಿದ್ದೀರಿ. ಭವಿಷ್ಯ, ಜೀವನ ಸಹ ಸವಾಲಿನದ್ದೇ ಆಗಿರುತ್ತದೆ. ಅದನ್ನೆಲ್ಲಾ ಆತ್ಮವಿಶ್ವಾಸದಿಂದ ಎದುರಿಸುವ ಮೂಲಕ ಜೀವನ ಸಾಧನೆಯೆಂಬ ಸಾಹಸದಲ್ಲಿ ನೀವೆಲ್ಲರೂ ಯಶಸ್ವಿಯಾಗಬೇಕು. ಈ ಸಂಸ್ಥೆಯಲ್ಲಿ ಓದಿದ ಅದೆಷ್ಟೋ ಹಿರಿಯ ವಿದ್ಯಾರ್ಥಿನಿಯರು ದೇಶ, ವಿದೇಶಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಆ ಎಲ್ಲರಿಗಿಂತ ಉನ್ನತ ಸಾಧನೆ ನಿಮ್ಮಿಂದ ಆಗಬೇಕು ಎಂದು ಕರೆ ನೀಡಿದರು.




ಮೊಬೈಲ್, ವಾಟ್ಸಾಪ್, ಫೇಸ್ ಬುಕ್, ಮೆಸೆಂಜರ್ ನಂತಹ ಸಾಮಾಜಿಕ ಜಾಲತಾಣಗಳನ್ನು ಹಿತಮಿತವಾಗಿ ಬಳಸಬೇಕು. ಊಟದ ಎಲೆಯಲ್ಲಿ ಚಿಟಿಕೆ ಉಪ್ಪು ಇಟ್ಟಿರುತ್ತಾರೆ. ರುಚಿಗೆ ತಕ್ಕಷ್ಟು ಮಾತ್ರ ಉಪ್ಪನ್ನು ಹೇಗೆ ಬಳಸುತ್ತೇವೆಯೋ, ಅದೇ ರೀತಿ ನಮ್ಮ ಜ್ಞಾನ ಹೆಚ್ಚಿಸಿಕೊಳ್ಳಲಷ್ಟೇ ಸಾಮಾಜಿಕ ಜಾಲತಾಣ ಬಳಸಿ. ಅನಾವಶ್ಯಕವಾಗಿ ಯಾರೊಂದಿಗೂ ಸಲಹೆ ಬೇಡ. ಜೀವನದಲ್ಲಿ ಎಂತಹದ್ದೇ ಸಮಸ್ಯೆ, ಸವಾಲುಗಳನ್ನು ಎದುರಿಸುತ್ತೇವೆಂಬ ಆತ್ಮವಿಶ್ವಾಸ ಮೈಗೂಡಿಸಿಕೊಂಡು ಸಾಧನೆ ಮಾಡಿ ಎಂದು ಅವರು ಕಿವಿಮಾತು ಹೇಳಿದರು.

> ಸಾಹಸ ಕ್ರೀಡೆಗಳ ತರಬೇತಿ ಕಾರ್ಯಾಗಾರದಲ್ಲಿ ಮೇಘನಾಥ್ ಕರೆ

ಸಂಪನ್ಮೂಲ ವ್ಯಕ್ತಿಯಾಗಿದ್ದ ಹಿಮಾ ಲಯನ್ ಅಡ್ವೆಂಚರ್ ಅಂಡ್ ನೇಚರ್ ಅಕಾಡೆಮಿ ಕಾರ್ಯದರ್ಶಿ, ಸಾಹಸ ಕ್ರೀಡೆಗಳ ತರಬೇತುದಾರ ಎನ್.ಕೆ.ಕೊಟ್ರೇಶ್ ಮಾತನಾಡಿದರು.

ರೆಡ್‌ಕ್ರಾಸ್ ಸಂಸ್ಥೆಯ ಸಂಚಾಲಕರಾದ ಶಿವಕುಮಾರ ಮತ್ತು ಇತರರು ಇದ್ದರು. ಇದೇ ವೇಳೆ ಕಾಲೇಜಿನ ಬೋಧಕ ಎಸ್.ಕಿರಣ್, ದೈಹಿಕ ಶಿಕ್ಷಕ ಎ.ಬಿ.ಸಿದ್ದೇಶ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

## ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಅಂಬೇಡ್ಕರ್ ದೀಕ್ಷಾಭೂಮಿಗೆ ತೆರಳಲು ಅರ್ಜಿ ಆಹ್ವಾನ

ದಾವಣಗೆರೆ, ಅ. 8 - ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಹಾರಾಷ್ಟ್ರದ ನಾಗಪುರದಲ್ಲಿನ ದೀಕ್ಷಾಭೂಮಿ ಯಾತ್ರೆಗೆ ತೆರಳಲು ಡಾ.ಬಿ.ಆರ್ ಅಂಬೇಡ್ಕರ್ ಅನುಯಾಯಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ನಾಡಿದ್ದು ದಿನಾಂಕ 10 ರೊಳಗಾಗಿ ವೆಬ್‌ಸೈಟ್ HYPERLINK ihttps://sw.kar.nic.in/i \t i_blanki https://sw.kar.nic.in ನಲ್ಲಿ ನೋಂದಣಿ ಮಾಡಿಕೊಂಡು ಸ್ವೀಕೃತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಸಂಪರ್ಕಿಸಲು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಕೆ. ನಾಗರಾಜ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಎ.ಎಚ್. ಶಿವಮೂರ್ತಿ ಸ್ವಾಮಿ ಅವರಿಗೆ ಶ್ರದ್ಧಾಂಜಲಿ



ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ದಾವಣಗೆರೆ ಜಿಲ್ಲಾ ಘಟಕ ಮತ್ತು ಜಿಲ್ಲಾ ಮಹಿಳಾ ಘಟಕಗಳ ಆಶ್ರಯದಲ್ಲಿ ಶ್ರೀ ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ. ಎಚ್. ಶಿವಮೂರ್ತಿ ಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಮಾರಂಭವು ಇಂದು ಮಧ್ಯಾಹ್ನ 2 ಗಂಟೆಗೆ ಶ್ರೀಗಂಧ ರೆಸಿಡೆನ್ಸಿ ಹಾಲ್‌ನಲ್ಲಿ ನಡೆಯಲಿದೆ.

ದಿವ್ಯ ಸಾನಿಧ್ಯವನ್ನು ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ, ದಾವಣಗೆರೆ, ಶಿವಮೊಗ್ಗದ ಡಾ. ಕಲ್ಲಯ್ಯ ಅಜ್ಜನವರು ವಹಿಸುವರು ಎಂದು ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಜಿಲ್ಲಾಧ್ಯಕ್ಷ ಪಿ.ಬಿ. ವಿನಾಯಕ ತಿಳಿಸಿದ್ದಾರೆ.

## ಸಹಕಾರ ಕ್ಷೇತ್ರ ಬೆಳೆದರೆ ದೇಶದ ಅಭಿವೃದ್ಧಿ

### ರಾಣೇಬೆನ್ನೂರು ಜೇಸಿಸ್ ಕ್ರೆಡಿಟ್ ಸೊಸೈಟಿ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷ ಶ್ರೀನಿವಾಸ ಕಾಕಿ




ರಾಣೇಬೆನ್ನೂರು,ಅ.8- ಸಹಕಾರ ಕ್ಷೇತ್ರವನ್ನು ಬೆಳೆಸಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ, ಇದಕ್ಕೆ ಸದಸ್ಯರ ಪಾತ್ರ ಬಹಳ ಮುಖ್ಯವಾಗಿರುತ್ತದೆ ಎಂದು ಜೇಸಿಸ್ ಕ್ಷೇಮಾಭಿವೃದ್ಧಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಶ್ರೀನಿವಾಸ ಕಾಕಿ ಹೇಳಿದರು.

ಇಲ್ಲಿನ ಎರೇಕುಪ್ಪಿ ರಸ್ತೆಯ ಶ್ರೀ ನೀಲಕಂಠೇಶ್ವರ ದೇವಸ್ಥಾನ ಆವರಣದ ಗಣೇಶೋತ್ಸವ ಮಂಟಪದಲ್ಲಿ ಮೊನ್ನೆ ಜರುಗಿದ ಜೇಸಿಸ್ ಕ್ಷೇಮಾಭಿವೃದ್ಧಿ ಕ್ರೆಡಿಟ್ ಕೋ-ಆಪ್ ಸೊಸೈಟಿಯ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೊಸೈಟಿಯ ವತಿಯಿಂದ ಅನೇಕ ಸಾಲ ಸೌಲಭ್ಯ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕ ವಿಕ್ರಮ ಕುಲಕರ್ಣಿ ಹಾಗೂ ಹಿರಿಯ ಸದಸ್ಯರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಉಪಾಧ್ಯಕ್ಷ ಪ್ರಭುಲಿಂಗಪ್ಪ ಹಲಗೇರಿ, ನಿರ್ದೇಶಕರಾದ ಶಿವಾನಂದ ಹಿತ್ತಲಮನಿ, ಎಚ್.ಎನ್.ದೇವಕುಮಾರ, ಭೀಮಣ್ಣ ಕಾಕಿ, ಜಯಣ್ಣ ಕರಡೇರ, ಮಂಜುನಾಥ ಗೋಂದಕರ, ಗದಿಗೆಪ್ಪ ಬಗಾಡೆ, ಲಕ್ಷ್ಮಣ ಕನಕಿ, ಲತಾ ಅತಡಕರ, ಶಶಿಕಲಾ ಮಾಗನೂರ, ಪ್ರಕಾಶ ಗಚ್ಚಿನಮಠ, ಪ್ರಭು ಎಳೆಹೊಳೆ, ಎನ್.ಬಸಪ್ಪ, ವ್ಯವಸ್ಥಾಪಕ ಪ್ರವೀಣ ಸುರಹೊನ್ನಿ, ಸಹಾಯಕ ಪ್ರಕಾಶ ಹಿರೇಕೆರೂರ, ಜೇಸಿಐ ಘಟಕದ ಅಧ್ಯಕ್ಷೆ ಲಕ್ಷ್ಮಿ ಅಡಕಿ, ಸದಸ್ಯರಾದ ವೆಂಕಟೇಶ ಕಾಕಿ, ಸಿದ್ದಪ್ಪ ಅತಡಕರ, ಮೃತ್ಯುಂಜಯ ಮಾಗನೂರ, ನಾರಾಯಣ ಬಿಸಲಹಳ್ಳಿ, ಹರೀಶ ಕೋರ್ಪಡೆ ಹಾಗೂ ಸೊಸೈಟಿಯ ಸದಸ್ಯರು ಇದ್ದರು.

# ವಿಶ್ವಮಟ್ಟದಲ್ಲಿ 'ಯೋಗ' ಕ್ಕೆ ಹೆಚ್ಚು ಮಹತ್ವ: ಶಂಕರ್ ಖಟಾವ್‌ಕರ್



ದಾವಣಗೆರೆ, ಅ. 8- ವಿಶ್ವಮಟ್ಟದಲ್ಲಿ 'ಯೋಗ' ಕ್ಕೆ ಹೆಚ್ಚು ಮಹತ್ವ ಬಂದಿದೆ. ಭಾರತೀಯ ಯೋಗ ಪಟುಗಳು ತಮ್ಮ ಯೋಗ ಸಾಧನೆ ಮೂಲಕ ಹೆಸರು, ಕೀರ್ತಿಯನ್ನು ತಂದುಕೊಟ್ಟಿದ್ದಾರೆ ಎಂದು ಹರಿಹರ ನಗರಸಭೆ ಮಾಜಿ ಸದಸ್ಯ ಶಂಕರ್ ಖಟಾವ್‌ಕರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಗರದ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಸಪ್ತರ್ಷಿ ಯೋಗಧಾರ ಸ್ಪೋರ್ಟ್ಸ್ ಅಕಾಡೆಮಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಇಂದು ಆಯೋಜಿಸಿದ್ದ ರಾಷ್ಟ್ರಮಟ್ಟದ ಮಹಿಳೆಯರ ಯೋಗಾಸನ ಚಾಂಪಿಯನ್ ಶಿಪ್ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯೋಗಕ್ಕೆ ಯಾವುದೇ ಜಾತಿ, ಮತಗಳ ಬೇಧವಿಲ್ಲ. ಯೋಗದಿಂದ ಭಾವೈಕ್ಯತೆ ಬೆಳೆಯುತ್ತದೆ. ಈ ಸ್ಪರ್ಧೆಯಲ್ಲಿ ವಿವಿಧ ರಾಜ್ಯಗಳು ಸೇರಿದಂತೆ ರಾಜ್ಯದ 200 ಯೋಗಪಟುಗಳು ಭಾಗವಹಿಸಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಉತ್ತಮ ಸಾಧನೆ ಮಾಡುವ ಮೂಲಕ ಭವಿಷ್ಯ ಉಜ್ವಲವಾಗಲೆಂದು ಶುಭ ಹಾರೈಸಿದರು.

ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ಹಾಗೂ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ಮಕ್ಕಳು ಯೋಗಕ್ಕೆ ಪ್ರಾಮುಖ್ಯತೆ ನೀಡುತ್ತಿರುವಂತೆ ನಿಯತಕಾಲಿಕೆ ಓದುವುದು, ಕಥೆ-ಕಾದಂಬರಿ ಓದುವುದು, ಸಾಮಾನ್ಯ ಜ್ಞಾನ ಸೇರಿದಂತೆ, ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕೆಂದು ಕರೆ ನೀಡಿದರು.

ಜೀವನದಲ್ಲಿ ಎಂಥದೇ ಕ್ಲಿಷ್ಟಕರ ಸಮಸ್ಯೆಗಳು ಎದುರಾದರೂ ಅವುಗಳನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಯೋಗ ಪಟುಗಳಲ್ಲಿ ಯಾರಿಗಾದರೂ ಮುಂದೆ ಐಎಎಸ್, ಐಪಿಎಸ್, ಐಆರ್‌ಎಸ್, ಐಎಫ್‌ಎಸ್ ಮಾಡಬೇಕೆಂಬ ಗುರಿ ಹೊಂದಿದ್ದರೆ. ನಮ್ಮ ಸಂಸ್ಥೆಯಿಂದ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದರು.

ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ಎಲ್. ರಾಯ್ಕರ್ ಮಾತನಾಡಿ, ಭಾರತೀಯ ಯೋಗ ಕಲೆ ಜಗತ್ತಿಗೇ ಮಾದರಿಯಾಗಿದೆ. ಭಾರತ ದೇಶ ವಿವಿಧ ಕ್ರೀಡೆಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದೆ. ಯೋಗದಲ್ಲೂ ಕೂಡ ಇನ್ನೂ ಎತ್ತರಕ್ಕೆ ಬೆಳೆಯಬೇಕಾಗಿದೆ ಎಂದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಮಕ್ಕಳು ಮತ್ತು ಮಹಿಳೆಯರಲ್ಲಿ ಹುದುಗಿರುವ ಪ್ರತಿಭೆಯನ್ನು ಪ್ರದರ್ಶಿಸಲು ಈ ವೇದಿಕೆ ತುಂಬಾ ಸಹಕಾರಿಯಾಗಿದೆ. ವಿವಿಧ ಭಾಗಗಳಿಂದ ಆಗಮಿಸಿರುವ ಯೋಗ ಪಟುಗಳು ಉತ್ತಮ ಪ್ರದರ್ಶನ ನೀಡಿದ್ದಾರೆಂದರು.

ಯೋಗಾಸನ ಸ್ಪರ್ಧೆಯಲ್ಲಿ ಪಾಲ್ಗೊಂಡ ಯೋಗಪಟುಗಳು ಇನ್ನೂ ತಮ್ಮಲ್ಲಿರುವ ಪ್ರತಿಭೆಯನ್ನು ತೋರ್ಪಡಿಸುವ ಮೂಲಕ ಉನ್ನತ ಸಾಧನೆಗೈಯ್ಯುವಂತೆ ಸಲಹೆ ನೀಡಿದರು.

ಎಸ್‌ವೈಎಸ್‌ಎ ಉಪಾಧ್ಯಕ್ಷರೂ, ಪ್ರಾಧ್ಯಾಪಕರೂ ಆದ ವೀರಣ್ಣ ಬಿ. ಶೆಟ್ಟರ್, ಹರಿಹರ ವೈದ್ಯಾಧಿಕಾರಿ ಡಾ.ವಿಶ್ವನಾಥ್ ಕುಂದುಗೋಳಮಠ, ಕರ್ನಾಟಕ ಸ್ಟೇಟ್ ಅಮೆಚೂರು ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ಜಿ.ಎನ್. ಕೃಷ್ಣಮೂರ್ತಿ ಅವರು ಯೋಗದ ಮಹತ್ವ, ಯೋಗ ಸಾಧನೆ ಕುರಿತು ಮಾತನಾಡಿದರು.

ಹರಿಹರ ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣ ಸಿದ್ದಪ್ಪ, ಸುನೀಲ್, ಡಾ. ಜೈಮುನಿ, ಡಾ. ಪರಶುರಾಮ್, ಡಾ. ಡಿ. ಫ್ರಾನ್ಸಿಸ್ ಕ್ಷೇವಿಯರ್ ಮತ್ತಿತರರು ಉಪಸ್ಥಿತರಿದ್ದರು.

## ಶ್ರೇಷ್ಠ ವಿಜ್ಞಾನಿ ಪಟ್ಟಿಯಲ್ಲಿ ಮಧುಕೇಶ್ ಬಿಇಎ ಶಿಕ್ಷಣ ವಿದ್ಯಾಲಯ ಸಂತಸ



ದಾವಣಗೆರೆ, ಅ. 8- ಅಮೆರಿಕಾದ ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾಲಯ ಅಕ್ಟೋಬರ್ 2023 ರಲ್ಲಿ ಪ್ರಕಟಿಸಿರುವ ವಿಶ್ವದ ಮೊದಲ ಶೇ. 2ರಷ್ಟು ಶ್ರೇಷ್ಠ ವಿಜ್ಞಾನಿಗಳ ಪಟ್ಟಿ ಯಲ್ಲಿ ನಗರದ ಬಿಇಎ ಶಿಕ್ಷಣ ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿ ಮಧುಕೇಶ್ ಜೆ.ಕೆ. ಅವರಿಗೆ ಜಾಗತಿಕ ಮಟ್ಟದಲ್ಲಿ ಸ್ಥಾನ ದೊರೆತಿದೆ. ಗಣಿತ ಶಾಸ್ತ್ರದ ಶಾಖ ಮತ್ತು ಸಮೂಹ ವರ್ಗಾವಣೆ, ದ್ರವಚನ ಶಾಸ್ತ್ರ ವಿಷಯಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಮಧುಕೇಶ್, ಜೆ.ಕೊಟ್ರೇಶ್ ಮತ್ತು ಶ್ರೀಮತಿ ಮಂಗಳಾ ಡಿ. ದಂಪತಿ ಪುತ್ರ.

ಮಧುಕೇಶ್ ಅವರನ್ನು ಬಿಇಎ ಶಿಕ್ಷಣ ಮಹಾವಿದ್ಯಾಲಯದ ಆಡಳಿತ ವರ್ಗ, ಪ್ರಾಂಶುಪಾಲರಾದ ಶ್ರೀಮತಿ ನೀತಾ ರಂಗಸ್ವಾಮಿ, ಬೋಧಕ ಮತ್ತು ಬೋಧಕೇತರ ವರ್ಗ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಸತ್ಯಭಾಮ ಅವರಿಗೆ ಇಂದು 'ಸಿಜಿಕೆ' ಪ್ರಶಸ್ತಿ



ಕಲೆ, ಸಾಹಿತ್ಯ ಸೇವಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಶ್ರೀಮತಿ ಸತ್ಯಭಾಮ ಮಂಜುನಾಥ್ ಅವರಿಗೆ 'ಸಿ.ಜಿ.ಕೆ.' (ದಿ. ಸಿ.ಜೆ. ಕೃಷ್ಣಸ್ವಾಮಿ) ಪ್ರಶಸ್ತಿಯನ್ನು ಇಂದು ಮಧ್ಯಾಹ್ನ 3 ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ನೀಡಿ ಗೌರವಿಸಲಾಗುವುದು. ಪರಮಪೂಜ್ಯರು ಮತ್ತು ಗಣ್ಯರ ಸಮ್ಮುಖದಲ್ಲಿ ಈ ಪ್ರಶಸ್ತಿ ಪ್ರದಾನ ನಡೆಯುವುದು. ಕರ್ನಾಟಕ ರಂಗ ಪರಿಷತ್ (ಬೆಂಗಳೂರು) ವತಿಯಿಂದ ಈ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಕರ್ನಾಟಕ ರಂಗ ಪರಿಷತ್ ಉಪಾಧ್ಯಕ್ಷ ಎನ್.ಎಸ್. ರಾಜು ತಿಳಿಸಿದ್ದಾರೆ.

# ಉಚಿತ ಪ್ರಸಾದ ನಿಲಯಗಳ ಪಿತಾಮಹ ಲಿಂ. ಜಯದೇವ ಜಗದ್ಗುರುಗಳು

ದಾವಣಗೆರೆ, ಅ.8- ಉಚಿತ ಪ್ರಸಾದ ನಿಲಯಗಳ ಪಿತಾಮಹ ಲಿಂ.ಜಯದೇವ ಜಗದ್ಗುರುಗಳು ಎಂದು ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಬಣ್ಣಿಸಿದರು.

ನಗರದ ಬಸವ ಕೇಂದ್ರ, ಶಿವಯೋಗಾಶ್ರಮದಲ್ಲಿ ಲಿಂ.ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ರಥೋತ್ಸವ ಹಾಗೂ ವಚನ ಗ್ರಂಥ ಮೆರವಣಿಗೆ, 67ನೇ ವರ್ಷದ ಸ್ಮರಣೋತ್ಸವದ ಅಂಗವಾಗಿ ಇಂದು ಹಮ್ಮಿಕೊಳ್ಳಲಾಗಿದ್ದ ಶ್ರೀ ಜಯದೇವ ಲೀಲೆ ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಜಯದೇವ ಜಗದ್ಗುರುಗಳು ಸ್ವಾತಂತ್ರ್ಯ ಪೂರ್ವದಲ್ಲಿಯೇ ನಾಡಿನ ಬಡಮಕ್ಕಳಿಗಾಗಿ ಉಚಿತ ಪ್ರಸಾದ ನಿಲಯಗಳನ್ನು ಪ್ರಾರಂಭಿಸಿ, ಶೈಕ್ಷಣಿಕ ಕ್ರಾಂತಿಯನ್ನು ಮಾಡಿದ್ದರು ಎಂದರು.

ಇಪ್ಪತ್ತನೆಯ ಶತಮಾನದಲ್ಲಿ ಸಾಮಾ ಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯದ್ಭುತವಾದ ಸಮಾಜಮುಖಿ ಕಾರ್ಯಗಳನ್ನು ಮಾಡುವ ಮೂಲಕ ಸಮಾಜವನ್ನು ಉದ್ಧಾರ ಮಾಡಿದ ಕೀರ್ತಿ ಲಿಂ. ಜಗದ್ಗುರು ಜಯದೇವ ಶ್ರೀಗಳಿಗೆ ಸಲ್ಲುತ್ತದೆ ಎಂದರು.

ವಿಶ್ವಗುರು ಎಂದರೆ ಬಸವಣ್ಣನವರು ನೆನಪಿಗೆ ಬರುವಂತೆ, ಜಗದ್ಗುರು ಎಂದರೆ ಜಯದೇವ ಜಗದ್ಗುರುಗಳವರು ಎಂದು ಪ್ರಖ್ಯಾತರಾಗಿದ್ದಾರೆ. ಅವರ ಬದುಕು ನಾಡಿನ ಜನತೆಗೆ ಅದು ಆದರ್ಶ ಅಷ್ಟೇ ಅಲ್ಲ, ಮಾನವ ಕುಲಕ್ಕೆ ಜ್ಞಾನ ದೀಪದ ಸ್ತಂಭವಾಗಿ ಬೆಳಕನ್ನು ನೀಡುತ್ತಿದ್ದಾರೆ. ಅವರು ನಮ್ಮ ಭಕ್ತರ ಎದೆಯಲ್ಲಿ ಸದಾಕಾಲವೂ ಉಸಿರಾಗಿ ಬೆರೆತು ಹೋಗಿದ್ದಾರೆ. ಹಾಗಾಗಿ ಇಂದಿಗೂ ಎಲ್ಲರೂ ಅವರ ಸ್ಮರಣೆಯಲ್ಲಿದ್ದಾರೆ ಇದು ನಿಜವಾದ ಸಾಧನೆ ಎಂದರು. ಮಾನವ ಎಷ್ಟು ದಿನಗಳ ಕಾಲ ಬದುಕಿದ್ದ ಎನ್ನುವು ದಕ್ಕಿಂತ ಎಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಿದ್ದ ಎನ್ನುವುದು ಮಹತ್ವದ್ದಾಗಿದೆ. ಈ ನಾಡಿನಲ್ಲಿ ಲಕ್ಷಾಂತರ ಜನರಿಗೆ ವಿದ್ಯೆಯನ್ನು ನೀಡಿದ ಮಹಾಮಹಿಮರು ಜಯದೇವ ಜಗದ್ಗುರುಗಳವರಾಗಿದ್ದಾರೆ. ಹಾಗಾಗಿಯೇ ಅವರೊಬ್ಬ ವಿಭೂತಿ ಪುರುಷರು. ಯುಗ ಪುರುಷರೂ ಆಗಿದ್ದಾರೆ ಎಂದರು.

ಚನ್ನಗಿರಿಯ ಪ್ರವಚನಕಾರ ಮಹಾಂತೇಶ ಶಾಸ್ತ್ರಿಗಳು ತಮ್ಮ ಪ್ರವಚನದಲ್ಲಿ ಮಾತನಾಡುತ್ತಾ, ನರ ಜನ್ಮದಲ್ಲಿ ಹುಟ್ಟಿದವನು ಹರನಾಗಲು ಗುರುವಿನಿಂದ ಸನ್ಮಾರ್ಗದ ಕೃಪೆ ಇರಬೇಕು ಎಂದರು.

ಕಾಶಿಯಲ್ಲಿ ಮದನ್ ಮೋಹನ್ ಮಾಳವೀಯ ಅವರು ವಿಶ್ವವಿದ್ಯಾಲಯ ಸ್ಥಾಪಿಸಲು ಹಣಕ್ಕಾಗಿ ವಂತಿಕೆ ಸಂಗ್ರಹಿಸುವಾಗ ಅವರ ಬೆನ್ನ ಹಿಂದೆ ನಿಂತು ವಂತಿಗೆ ಸಂಗ್ರಹಿಸಲು ನೆರವಾಗಿದ್ದು ಲಿಂ.ಜಯದೇವ ಜಗದ್ಗುರುಗಳು. ಈ ಮೂಲಕ ಅವರು ಕಾಶಿಯಲ್ಲಿ ಕರ್ನಾಟಕದ ಹೆಸರನ್ನು ಅಜರಾಮರಗೊಳಿಸಿದ್ದಾರೆ ಎಂದರು.

ರೈತ ಮುಖಂಡ ತೇಜಸ್ವಿ ವಿ. ಪಟೇಲ್ ಸಮಾರಂಭ ಉದ್ಘಾಟಿಸಿದರು. ಬಸವಕಲಾ ಲೋಕದವರು ವಚನ ಸಂಗೀತ ನಡೆಸಿಕೊಟ್ಟರು.



ಶ್ರೀ ಜಯದೇವ ಲೀಲೆ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ

### ದೇಶ ಸುತ್ತಿ ಸಮಾಜ ಕಟ್ಟಿದವರು

1903 ರಲ್ಲಿ ಪೀಠವನ್ನು ಏರಿದ ಜಯದೇವ ಜಗದ್ಗುರುಗಳು 1956 ರವರೆಗೆ ಶೂನ್ಯಪೀಠವನ್ನು ಮುನ್ನಡೆಸಿದ್ದಾರೆ. ಒಂದು ಸಲ ಅವರ ತೊಡೆಯ ಮೇಲೆ ಒಂದು ಹುಣ್ಣು (ಗಾಯ) ಆಗಿ ವಿಪರೀತ ನೋವನ್ನು ಅನುಭವಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಶ್ರೀ ಗುರು ಮುರುಘೇಶರು ಅವರ ಕನಸಿನಲ್ಲಿ ಪ್ರತ್ಯಕ್ಷರಾಗಿ 'ಸುತ್ತು-ಕಟ್ಟು' ಎಂದು ಸಂದೇಶವನ್ನು ನೀಡುತ್ತಾರೆ .

ಅದೇ ರೀತಿಯಲ್ಲಿ ಸುತ್ತು ಕಟ್ಟಿ ತಮ್ಮ ಗಾಯವನ್ನು ವಾಸಿ ಮಾಡಿಕೊಂಡರು. ನಂತರ ದೇಶವನ್ನು ಸುತ್ತಿ ಸಮಾಜವನ್ನು ಕಟ್ಟಿದರು. ದಾವಣಗೆರೆ, ಚಿತ್ರದುರ್ಗ, ಧಾರವಾಡ, ಬೆಂಗಳೂರು, ತುಮಕೂರು, ತಿಪಟೂರು, ಅರಸಿಕೆರೆ, ಕಾಶಿ, ಕೊಲ್ಲಾಪುರ ಮುಂತಾದ ಸ್ಥಳಗಳಲ್ಲಿ ಉಚಿತ ಪ್ರಸಾದ ನಿಲಯಗಳನ್ನು ಸ್ಥಾಪಿಸಿದರು. ಅವು ಇಂದಿಗೂ ವ್ಯವಸ್ಥಿತವಾಗಿ ನಡೆಯುತ್ತಿವೆ. ಶತಮಾನೋತ್ಸವವನ್ನು ಕಂಡಿವೆ.

ಈ ವಿದ್ಯಾರ್ಥಿ ನಿಲಯಗಳಲ್ಲಿ ಕವಿ ಜಿ.ಎಸ್. ಶಿವರುದ್ರಪ್ಪ, ರತ್ನಪ್ಪ ಕುಂಬಾರ, ಎಂ. ಚಿದಾನಂದಮೂರ್ತಿ, ಕೊಂಡಜ್ಜಿ ಬಸಪ್ಪ ಮುಂತಾದವರು ಓದಿ ನಾಡಿಗೆ ಹೆಸರಾಗಿದ್ದಾರೆ. ಇಂತಹ ಮಹಾತ್ಮರನ್ನು ಸ್ಮರಣೆ ಮಾಡಿ, ನಾವು ಸ್ಫೂರ್ತಿಯನ್ನು ಪಡೆದು ಸಾಧನೆಯನ್ನು ಮಾಡಿ ನಮ್ಮ ಜೀವನ ಸಾರ್ಥಕ ಮಾಡಿಕೊಳ್ಳೋಣ ಎಂದು ಶ್ರೀ ಬಸವ ಪ್ರಭು ಸ್ವಾಮೀಜಿ ಕರೆ ನೀಡಿದರು.

## ಪಾಲಿಕೆಯಿಂದ ವಿಶಾಖಪಟ್ಟಣಕ್ಕೆ ಅಧ್ಯಯನ ಸಮಿತಿ



ದಾವಣಗೆರೆ, ಅ.8- ಮಹಾನಗರ ಪಾಲಿಕೆ ವತಿಯಿಂದ ಮಹಾಪೌರ ವಿನಾಯಕ ಬಿ.ಹೆಚ್ ಅಧ್ಯಕ್ಷತೆಯಲ್ಲಿ ಉಪಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಸದಸ್ಯರುಗಳು ಮತ್ತು ಅಧಿಕಾರಿಗಳ ನಿಯೋಗವು ಆಂಧ್ರಪ್ರದೇಶದ ವಿಶಾಖಪಟ್ಟಣಂ ನಗರಕ್ಕೆ ಅಧ್ಯಯನ ಪ್ರವಾಸ ಕೈಗೊಂಡು, ಗ್ರೇಟರ್ ವಿಶಾಖಪಟ್ಟಣ ಮಹಾನಗರ ಪಾಲಿಕೆಯ ವತಿಯಿಂದ ಅನುಷ್ಠಾನಗೊಳಿಸಲಾಗಿರುವ 24x7 ಜಲಸಿರಿ ನೀರು ಸರಬರಾಜು ಯೋಜನೆಯನ್ನು ವೀಕ್ಷಿಸಿದರು.

ವಿಶಾಖಪಟ್ಟಣ ಮಹಾನಗರ ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿರುವ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಮತ್ತು ಸ್ವಾಪಿಂಗ್ ಕೇಂದ್ರ, ಬೀಚ್ ರಸ್ತೆ, ಉಚಿತ ಆಟೋ ಸೇವೆ ಮತ್ತು ನೀರು ಸರಬರಾಜು ಘಟಕಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿದರು.

ಈ ಸಂದರ್ಭದಲ್ಲಿ ವಿಶಾಖಪಟ್ಟಣದ ಮಹಾಪೌರರಾದ ಶ್ರೀಮತಿ ಗೋಲಗಾನಿ ಹರಿ ವೆಂಕಟಕುಮಾರಿ, ಉಪಮಹಾಪೌರ ಜಿಯ್ಯಾನಿ ಶ್ರೀಧರ್ ಹಾಗೂ ಮಹಾನಗರ ಪಾಲಿಕೆ ಆಡಳಿತ ಪಕ್ಷದ ನಾಯಕ ಬಾನಲ ಶ್ರೀನು ಅವರು ದಾವಣಗೆರೆ ಮಹಾಪೌರರಾದ ವಿನಾಯಕ ಬಿ.ಹೆಚ್. ಹಾಗೂ ಉಪಮಹಾಪೌರರಾದ ಶ್ರೀಮತಿ ಯಶೋಧ ಯಗ್ಗಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಬ್ದುಲ್ ಲತೀಫ್, ಶ್ರೀಮತಿ ಮೀನಾಕ್ಷಿ ಜಗದೀಶ್, ವಿರೋಧ ಪಕ್ಷದ ನಾಯಕ ಪ್ರಸನ್ನ ಕುಮಾರ್ ಮತ್ತು ಎಲ್ಲಾ ಸದಸ್ಯರುಗಳನ್ನು ಸನ್ಮಾನಿಸಿದರು.

## ಈಜಿಪ್ಟ್ ಪೊಲೀಸ್‌ನಿಂದ ಇಸ್ರೇಲ್‌ನ ಇಬ್ಬರು ಪ್ರವಾಸಿಗರ ಹತ್ಯೆ

ಕೈರೊ, ಅ. 8 - ಈಜಿಪ್ಟಿನ ಅಲೆಕ್ಸಾಂಡ್ರಿಯ ನಗರದಲ್ಲಿ ಇಸ್ರೇಲಿ ಪ್ರವಾಸಿಗರ ಮೇಲೆ ಈಜಿಪ್ಟ್ ಪೊಲೀಸ್ ಓರ್ವ ಗುಂಡು ಹಾರಿಸಿದ್ದು, ಕನಿಷ್ಠ ಇಬ್ಬರು ಇಸ್ರೇಲ್ ಹಾಗೂ ಓರ್ವ ಈಜಿಪ್ಟ್ ನಾಗರಿಕ ಸಾವನ್ನಪ್ಪಿದ್ದಾರೆ. ದಾಳಿಯ ನಂತರ ಭದ್ರತಾ ಪಡೆ ಇಡೀ ಪ್ರದೇಶ ಸುತ್ತುವರೆದಿವೆ. ಇನ್ನೋರ್ವ ವ್ಯಕ್ತಿ ಗಾಯಗೊಂಡಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

## ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ದಾವಣಗೆರೆ, ಅ. 8 - ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್ ಕೌಲಾಪೂರೆ ಅವರು ಇದೇ ದಿನಾಂಕ 11 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಕಂದಾಯ ಭವನದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.


### ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ 01.01.1940

ನಿಧನ 09.10.2022

**ಲಿಂ. ಕೊಂಡಜ್ಜಿ ಪಾರ್ವತಮ್ಮ**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.

ನಿಮ್ಮ ಸವಿ ನೆನಪೇ ನಮಗೆ ದಿವ್ಯ ಚೇತನ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಸದಾ ಪ್ರಾರ್ಥಿಸುವ ಹಾಗೂ ಸದಾ ನಿಮ್ಮ ಸವಿನೆನಪಿನಲ್ಲಿರುವ

ಪತಿ : ಕೊಂಡಜ್ಜಿ ಶ್ರೀ ಎಂ. ನಾಗಪ್ಪ ಮಕ್ಕಳು : ♦ ಶ್ರೀಮತಿ ಶಾರದ ♦ ಶ್ರೀ ನಿರಂಜನಮೂರ್ತಿ ♦ ಶ್ರೀ ಚಂದ್ರಕಾಂತ್ ♦ ಶ್ರೀ ಸತೀಶ್ ♦ ಡಾ. ಲೋಹಿತ್ ಮತ್ತು ಕುಟುಂಬದವರು ಹಾಗೂ ಬಂಧು ಮಿತ್ರರು.

ಸರಸ್ವತಿ ನಗರ, ದಾವಣಗೆರೆ, ಮೊ : 94496 28863



SPARSH HOSPITAL THE TOUCH OF LIFE



### ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್

ಹೃದಯ ವೈಫಲ್ಯ ಕ್ಲಿನಿಕ್
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು
ಸಮಾಲೋಚನೆಗಾಗಿ ದಾವಣಗೆರೆಗೆ ಭೇಟಿ ನೀಡಲಿದ್ದಾರೆ

### ಡಾ॥ ಪಿ ಅಶೋಕ್ ಕುಮಾರ್

MBBS, MD, DM, FSCAI Interventional Cardiology,
Advanced Heart Failure Management & Transplant Cardiology

**Consultant Cardiologist**

ಈ ಕೆಳಕಂಡ ತೊಂದರೆಗಳಿಗೆ ಸಲಹೆ ನೀಡಲಾಗುವುದು

ಹೃದಯ ಲಯದ ತೊಂದರೆಗಳು (Arrhythmias) । ನೀವು ಜನಿಸುವಾಗ ಕಂಡು ಬಂದ ಹೃದಯ ದೋಷಗಳು (Congenital Heart Defects) ಹೃದಯ ಕವಾಟದ ಕಾಯಿಲೆ । ಹೃದಯ ಸ್ನಾಯುವಿನ ಕಾಯಿಲೆ । ಹೃದಯದ ಸೋಂಕು । ಎದೆ ನೋವು, ಎದೆಯ ಬಿಗಿತ, ಎದೆಯ ಒತ್ತಡ ಮತ್ತು ಎದೆಯ ಅಸ್ವಸ್ಥತೆ (Angina) । ಆಯಾಸ । ಒತ್ತಡ । ಪಾದದ ಊತ । ಉಸಿರಾಟ ತೊಂದರೆ

ನೋಂದಣಿಗಾಗಿ ಕರೆಮಾಡಿ: 97316 41986 | 99800 33277

ಸೂಚನೆ: ವೈದ್ಯರು ಪ್ರತೀ ತಿಂಗಳ ಎರಡನೇ ಬುಧವಾರ ತಪಾಸಣೆಗೆ ಲಭ್ಯರಿರುತ್ತಾರೆ

ದಿನಾಂಕ: ಬುಧವಾರ, 11ನೇ ಅಕ್ಟೋಬರ್ 2023 | ಸಮಯ: ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 1:00 ರವರೆಗೆ

ಸ್ಥಳ: ಸಿಟಿ ಸೆಂಟ್ರಲ್ ಆಸ್ಪತ್ರೆ

ಅಕ್ಕಮಹಾದೇವಿ ರಸ್ತೆ, 17, AVK ಕಾಲೇಜು ರಸ್ತೆ, ಪಿ ಜೆ ಎಕ್ಸಟೆನ್ಶನ್, ದಾವಣಗೆರೆ – 577 002



# ಬಸವನಕೋಟೆ ಗ್ರಾಮದ ಶ್ರೀಮತಿ ಪಾರ್ವತಮ್ಮ ನಿಧನ

ಮರಣವೇ ಮಹಾನವಮಿ




ಲಿಂ।। ಶರಣೆ ಪಾರ್ವತಮ್ಮನವರು

ಬಸವನಕೋಟೆ

ಜನನ : 02.08.1929 ಮರಣ : 06.10.2023

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥







ಜಗಳೂರು ತಾಲ್ಲೂಕು, ಬಸವನಕೋಟೆ ಗ್ರಾಮದ

ಶ್ರೀ ರೇವಣಸಿದ್ದಪ್ಪ ಮತ್ತು ಡಾ।। ಸಿದ್ದಲಿಂಗಪ್ಪ (USA) ಇವರ ತಾಯಿಯವರೂ ಮತ್ತು ಲಿಂ।। ಶ್ರೀ ಹುಣಸೆಕಟ್ಟೆ ಮರುಳಪ್ಪನವರ ಧರ್ಮಪತ್ನಿ

**ಶ್ರೀಮತಿ ಪಾರ್ವತಮ್ಮ** ಅವರು

ದಿನಾಂಕ 06-10-2023ರ ಶುಕ್ರವಾರ ಬೆಳಗಿನ ಜಾವ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಶ್ರೀಮತಿ ಪಾರ್ವತಮ್ಮ ಅವರ ಪಾರ್ಥೀವ ಶರೀರವನ್ನು ದಿನಾಂಕ 09-10-2023ರ ಸೋಮವಾರ ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್, 4ನೇ ಮೇನ್, 2ನೇ ಕ್ರಾಸ್‌ನಲ್ಲಿರುವ (# 2841) ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು.

ನಂತರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮ ಬಸವನಕೋಟೆ ಗ್ರಾಮದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

✦ ಶ್ರೀಮತಿ ಸುನಂದಮ್ಮ ಮತ್ತು ಶ್ರೀ ರೇವಣಸಿದ್ದಪ್ಪ ಹಾಗೂ ಮಕ್ಕಳು, ಮೊಮ್ಮಕ್ಕಳು
✦ ಶ್ರೀಮತಿ ರೇಖಾಂಬಿಕಾ ಮತ್ತು ಡಾ।। ಸಿದ್ದಲಿಂಗಪ್ಪ (USA) ಹಾಗೂ ಮಕ್ಕಳು, ಮೊಮ್ಮಕ್ಕಳು
✦ ಶ್ರೀಮತಿ ಲೀಲಾವತಿ ಮತ್ತು ಶ್ರೀ ಚನ್ನಪ್ಪ ಹಾಗೂ ಮಕ್ಕಳು
✦ ಶ್ರೀಮತಿ ಅನಸೂಯ ಮತ್ತು ಶ್ರೀ ಬಸವರಾಜ ಹಾಗೂ ಮಕ್ಕಳು
✦ ಶ್ರೀಮತಿ ಸಂಗೀತ ಮತ್ತು ಶ್ರೀ ನಾಗಪ್ಪ ಹಾಗೂ ಮಕ್ಕಳು
✦ ಶ್ರೀಮತಿ ಗೌರಮ್ಮ ಮತ್ತು ಶ್ರೀ ಜ್ಯೋತಿಗೌಡ ಹಾಗೂ ಮಕ್ಕಳು
✦ ಶ್ರೀಮತಿ ಕಮಲಮ್ಮ ಮತ್ತು ಕಲ್ಲಿಂಗಪ್ಪ ಹಾಗೂ ಮಕ್ಕಳು, ಮೊಮ್ಮಕ್ಕಳು
✦ ಶ್ರೀಮತಿ ದಾಕ್ಷಾಯಣಮ್ಮ ಮತ್ತು ಶ್ರೀ ಚಂದ್ರಶೇಖರಗೌಡ ಹಾಗೂ ಮಕ್ಕಳು
✦ ಶ್ರೀಮತಿ ಸೌಭಾಗ್ಯಮ್ಮ ಮತ್ತು ಶ್ರೀ ಯುವರಾಜ ಹಾಗೂ ಮಕ್ಕಳು
✦ ಶ್ರೀಮತಿ ಭದ್ರಮ್ಮ ✦ ಮಗಳು : ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ನಾಗರಾಜ ಹಾಗೂ ಮಕ್ಕಳು
✦ ಶ್ರೀಮತಿ ಲತಾ ಮತ್ತು ಶ್ರೀ ರಾಮದಾಸ್ ಹಾಗೂ ಮಕ್ಕಳು
ಮತ್ತು ಮರಿ ಮೊಮ್ಮಕ್ಕಳು, ಬಣಕಾರ್ ವಂಶಸ್ಥರು ಹಾಗೂ ಬಂಧು-ಮಿತ್ರರು.

ಮೊಬೈಲ್ : 99640 30737, 99002 65604, 94483 96680